ಶ್ರೀ ಶ್ಯಾಮಸುಂದರ - 1 "

"ಶ್ರೀ ರಾಯರ, ಶ್ರೀ ಮಾನವಿರಾಯರ ಆಪ್ತರು ವರಕವಿ ಶ್ರೀ ಶ್ಯಾಮ ಸುಂದರ ದಾಸರು"

ದಿನಾಂಕ : 13.05.19 ಸೋಮವಾರ ಶ್ರೀ ಶ್ಯಾಮಸುಂದರದಾಸರ ಆರಾಧನಾ ಮಹೋತ್ಸವ!!!

ಆಚಾರ್ಯ ನಾಗರಾಜು ಹಾವೇರಿ ( ವೆಂಕಟನಾಥ ಯೆಂಬ ಮುದ್ರಿಕೆಯಲ್ಲಿ ) ....

ಶ್ಯಾಮಸುಂದರ ದಾಸರ್ಗೆ ನಮೋ ನಮೋ ।
ಶ್ಯಾಮಾರ್ಯ ಕೋಪ್ರಮ್ಮರ ಪುತ್ರರ್ಗೆ ನಮೋ ನಮೋ ।। ಪಲ್ಲವಿ ।।

ಶೌರಿ ಕಥಾಮೃತ ರಚಿಸಿದ ಸಹ್ಲಾದಾಂಶ ।
ಧೀರ ಮಾನವಿ ಮುನಿಪುಂಗವರ ಸೂನುವಾದ ।। ಚರಣ ।।

ಹರಿಕಥಾಮೃತಸಾರ ಸಿದ್ಧಿ ಪಡೆದು ।
ವರಕವಿ ಶ್ಯಾಮಸುಂದರರಯೆಂದು ಖ್ಯಾತರಾದ ।। ಚರಣ ।।

ಗುರುಸಾರ್ವಭೌಮರಲಿ ಪರಮ ಭಕುತಿ ಮಾಡಿ ।
ಹರಿವಾಯುಗುರುದಾಸರ ಮೇಲೆ ಪದ ರಚಿಸಿದ ।। ಚಾರಣ ।।

ಗುರು ಜಗನ್ನಾಥದಾಸರ ಕರುಣೆಲಿ ಮಾತನಾಡಿ ।
ವರ ಕವಿಯೆಂದು ಕೀರ್ತಿ ಗಳಿಸಿದ ।। ಚರಣ

ಐಕೂರು ನರಸಿಂಹಾಚಾರ್ಯರಲಿ ಶಿಷ್ಯತ್ವ ವಹಿಸಿ ।
ಅಸ್ಕಿಹಾಳ ಗೋವಿಂದದಾಸರ ಅನುಗ್ರಹ ಪಡೆದ ।। ಚರಣ ।।

ಲಕುಮೀಶ ಗುರುಶ್ಯಾಮಸುಂದರರೆಂಬ ಶಿಷ್ಯರನು ಪಡೆದು ।
ಲಕುಮೀಕಾಂತ ವೆಂಕಟನಾಥನ ಧ್ಯಾನಿಪ ದೊರೆಯ ।। ಚರಣ ।।

ಭಾರತ ಭೂಮಿ ಹಲವು ಸಂಸ್ಕೃತಿಗಳ ತವರಾಗಿದೆ.
ಹಲವು ಧರ್ಮಗಳ ಆಗರವಾಗಿದೆ.
ಅದರಲ್ಲೂ ಕರ್ನಾಟಕವಂತೂ ವಿವಿಧ ಭಕ್ತಿ ಪಂಥಗಳ ನೆಲೆಯಾಗಿದೆ.

ಹರಿದಾಸ ಸಾಹಿತ್ಯದ ಆದ್ಯ ಪ್ರವರ್ತಕರು 13ನೇ ಶತಮಾನದಲ್ಲಿ ಶ್ರೀ ಹರಿಯ ಆಜ್ಞೆಯಂತೆ ಧರೆಗಿಳಿದು ಬಂದ ಶ್ರೀ ವಾಯುದೇವರ ಅವತಾರಿಗಳಾದ ಶ್ರೀಮನ್ಮಧ್ವಾಚಾರ್ಯರು.

ಶ್ರೀಮನ್ಮಧ್ವಾಚಾರ್ಯರರಿಂದ ಪ್ರಾರಂಭಗೊಂಡ ಹರಿದಾಸ ಸಾಹಿತ್ಯದ ಬೆಳವಣಿಗೆಗೆ ನಾಂದಿ ಹಾಡಿದವರು ಶ್ರೀ ನರಹರಿತೀರ್ಥರು.

ಶ್ರೀ ನರಹರಿತೀರ್ಥರ ನಂತರ ದಾಸ ಸಾಹಿತ್ಯಕ್ಕೆ ಮೆರಗು ಕೊಟ್ಟವರು ಶ್ರೀ ಧ್ರುವಾಂಶ ಶ್ರೀಪಾದರಾಜರು.

ಶ್ರೀ ಶ್ರೀಪಾದರಾಜರಿಂದ ಮುಂದುವರೆದ ಈ ಸಾಹಿತ್ಯದ ಉಜ್ವಲ ಪರಂಪರೆಯನ್ನು ಬೆಳೆಸಿದವರು ಶ್ರೀ ಶಂಖುಕರ್ಣಾವತಾರಿಗಳಾದ ಶ್ರೀ ಪ್ರಹ್ಲಾದರೇ ವ್ಯಾಸರಾಜ ಗುರುಸಾರ್ವಭೌಮರು. ಶ್ರೀ ವ್ಯಾಸರಾಜರ ನೇತೃತ್ವದಲ್ಲಿ ದಾಸಕೂಟ ಪ್ರಾರಂಭವಾಯಿತು.

ಶ್ರೀ ಭಾವಿಸಮೀರ ವಾದಿರಾಜರು - ಶ್ರೀ ಯಮಾಂಶ ಕನಕದಾಸರು ಮತ್ತು ಶ್ರೀ ನಾರದಾಂಶ ಪುರಂದರದಾಸರು ಈ ದಾಸ ಕೂಟಕ್ಕೆ ಸೇರಿದವರು.

ಶ್ರೀ ಪುರಂದರದಾಸರ ಕಾಲವಂತೂ ಹರಿದಾಸ ಸಾಹಿತ್ಯದ " ಸುವರ್ಣ ಕಾಲ " ವೆನ್ನುತ್ತಿದ್ದರು.

ಶ್ರೀ ಪುರಂದರದಾಸರು ಸಾಮಾಜಿಕ ಮತ್ತು ಲೋಕ ನೀತಿಯ ಕುರಿತು ಖಡಾ ಖಂಡಿತವಾಗಿ ಆಡು ಭಾಷೆಯಲ್ಲಿ ಕೀರ್ತನೆಗಳನ್ನು ರಚಿಸಿದ್ದಾರೆ.

ಶ್ರೀ ಪುರಂದರದಾಸರ ಜಾಡಿನಲ್ಲಿಯೇ ಸಾಗಿದ ಮತ್ತೊಬ್ಬ ದಾಸ ಶ್ರೇಷ್ಠರೆಂದರೆ ಕವಿಸಾರ್ವಭೌಮ ಶ್ರೀ ಕನಕದಾಸರು.

ಹೀಗೆ ಹರಿದಾಸರುಗಳಿಂದ ಬೆಳೆದು ಹೆಮ್ಮರವಾಗಿ ದಾಸ ಸಾಹಿತ್ಯವು ಫಲವೀಯ್ಯುತ್ತಾ ಪ್ರಥಮ ಘಟ್ಟದ ಬೆಳವಣಿಗೆಗೆ ಸಾಧನವಾಯಿತು.

ದ್ವಿತೀಯ ಘಟ್ಟದಲ್ಲಿ ಶ್ರೀ ವಿಜಯರಾಯರು ಮತ್ತು ಅವರ ಶಿಷ್ಯ - ಪ್ರಶಿಷ್ಯ ಪರಂಪರೆ; ತೃತೀಯ ಘಟ್ಟದಲ್ಲಿ ಶ್ರೀ ಪ್ರಾಣೇಶದಾಸರು ಮತ್ತು ಅವರ ಶಿಷ್ಯ ಪ್ರಶಿಷ್ಯರು ಈ ಪರಂಪರೆಯನ್ನು ಮುಂದುವರೆಸುವುದರೊಂದಿಗೆ ತಮ್ಮದೇ ಆದ ವೈಶಿಷ್ಟ್ಯ ಪೂರ್ಣವಾದ ಸಾಹಿತ್ಯದಿಂದ ಹರಿದಾಸ ಸಾಹಿತ್ಯವನ್ನು ಜಗತ್ತಿನಾದ್ಯಂತ ವಿಸ್ತರಿಸಿದ್ದಾರೆ.

ದಾಸ ಸಾಹಿತ್ಯ ಎನ್ನುವುದು ವ್ಯಾಸ ಸಾಹಿತ್ಯದ ಇನ್ನೊಂದು ರೂಪ.
ವ್ಯಾಸ ಸಾಹಿತ್ಯ ಎನ್ನುವುದು ಹಣ್ಣಿನಂತೆ.
ದಾಸ ಸಾಹಿತ್ಯ ಎನ್ನುವುದು ಹಣ್ಣಿನ ರಸದಂತೆ.
ಹಣ್ಣು ತಿನ್ನಲಾಗದಿದ್ದವರು ರಸವನ್ನು ಸುಲಭವಾಗಿ ಕುಡಿಯುವಂತೆ; ಸಂಸ್ಕೃತ ಬಾರದೇ ಇರುವ ಪಾಮರರಿಗೆ ದಾಸ ಸಾಹಿತ್ಯ ಒಂದು ವರದಂತೆ.

" ಸುಧಾ ಓದು ಪದ ಮಾಡು " ಎನ್ನುವ ವಾಕ್ಯದಂತೆ ಪಂಡಿತರಿಗೂ ಕೂಡಾ ದಾಸ ಸಾಹಿತ್ಯ ಕ್ಲಿಷ್ಟವಾಗಬಹುದು. ಅಲ್ಲದೇ ಅವರವರ ಯೋಗ್ಯತೆಗೆ ತಕ್ಕಂತೆ ದಾಸ ಸಾಹಿತ್ಯ ಅರ್ಥವಾಗಬಹುದು.

" ಶ್ರೀ ಶ್ಯಾಮಸುಂದರದಾಸರ ವಂಶ "

ಶ್ರೀ ಹರಿ ನಾರಾಯಣ
|
ಶ್ರೀ ಮಹಾಲಕ್ಷ್ಮೀ
|
ಶ್ರೀ ಬ್ರಹ್ಮ - ಶ್ರೀ ವಾಯುದೇವರು
|
ಶ್ರೀ ಶ್ರೀಪಾದರಾಜರು
|
ಶ್ರೀ ವ್ಯಾಸರಾಜರು
|
ಶ್ರೀ ಪುರಂದರದಾಸರು
|
ಶ್ರೀ ವಿಜಯರಾಯರು
|
ಶ್ರೀ ಗೋಪಾಲದಾಸರು
|
ಶ್ರೀ ಜಗನ್ನಾಥದಾಸರು
|
ಶ್ರೀ ಶ್ಯಾಮಸುಂದರದಾಸರು

" ಶ್ರೀ ಶ್ಯಾಮಸುಂದರದಾಸರ ಸಂಕ್ಷಿಪ್ತ ಮಾಹಿತಿ "

ಹೆಸರು : ಶ್ರೀ ಗುಂಡಾಚಾರ್ಯರು

ತಂದೆ : ಶ್ರೀ ಶ್ಯಾಮಾಚಾರ್ಯರು

ತಾಯಿ : ಸಾಧ್ವೀ ಕೊಪ್ಪುಮ್ಮ

ಕಾಲ : ಕ್ರಿ ಶ 1896 - 1956

ಕುಲ ಗುರುಗಳು : ಶ್ರೀ ರಾಘವೇಂದ್ರತೀರ್ಥ ಗುರುಸಾರ್ವಭೌಮರು

ಸ್ವರೂಪೋದ್ಧಾರಕ ಗುರುಗಳು : ಶ್ರೀ ಜಗನ್ನಾಥದಾಸರು

ಗುರುಗಳು : ಶ್ರೀ ಐಕೋರು ನರಸಿಂಹಾಚಾರ್ಯರು, ಶ್ರೀ ಅಸ್ಕಿಹಾಳ ಗೋವಿಂದದಾಸರು

ಅಂಕಿತ : ಶ್ರೀ ಜಗನ್ನಾಥದಾಸರಿಂದ ಸ್ವಪ್ನಾಂಕಿತ " ಶ್ಯಾಮಸುಂದರವಿಠ್ಠಲ

ಸಮಕಾಲೀನ ಯತಿಗಳು :

ಶ್ರೀ ಸುಶೀಲೇಂದ್ರತೀರ್ಥರು; ಶ್ರೀ ಸುವ್ರತೀಂದ್ರತೀರ್ಥರು; ಶ್ರೀ ಸುಯಮೀಂದ್ರತೀರ್ಥರು

ಶಿಷ್ಯರು :

ಶ್ರೀ ವಿಜಯಸಾರಥಿವಿಠಲ; ಶ್ರೀ ಲಕುಮೀಶದಾಸರು ( ಶ್ರೀ ಕುರುಡಿ ರಾಘವೇಂದ್ರಾಚಾರ್ಯರು ), ಶ್ರೀ ಅಭಿನವ ಪ್ರಾಣೇಶದಾಸರು; ಶ್ರೀ ಶ್ರೀಕರವಿಠಲ; ಶ್ರೀ ಪದ್ಮನಾಭವಿಠಲ ಮತ್ತು ಶ್ರೀ ಗುರು ಶ್ಯಾಮಸುಂದರದಾಸರು ( ಶ್ರೀ ಸುಶೀಲೇಂದ್ರಾಚಾರ್ಯರು ),

ಉಪದೇಶ ಪಡೆದ ಶಿಷ್ಯರು :

ಮರತೇಡ್ ಶ್ರೀನಿವಾಸರಾಯರು, ಚೀಲಕಪರವೀ ಶ್ರೀ ನರಸಿಂಹದಾಸರು, ದಡದಲ ಶ್ರೀ ನರಸಿಂಗರಾಯರು ಮತ್ತು ದಡದಲ ಶ್ರೀ ಭೀಮಸೇನದಾಸರು ( ಶ್ರೀ ಮೋತಿದಾಸರು )

" ಶ್ರೀ ದಾಮೋದರರದಾಸರೇ ಶ್ರೀ ಶ್ಯಾಮಸುಂದರದಾಸರು "

ಶ್ಯಾಮಸುಂದರದಾಸರು ಹಿಂದಿನ ಜನ್ಮದಲಿ ರಂಗ ಒಲಿದ ದಾಸರಾಯರಾದ ಶ್ರೀ ಜಗನ್ನಾಥದಾಸರ ಪುತ್ರರಾದ ಶ್ರೀ ದಾಮೋದರದಾಸರಾಗಿ ಅವತರಿಸಿ ಶ್ರೀ ಜಗನ್ನಾಥದಾಸರ ವದನಾರವಿಂದದಲ್ಲಿ ಹೊರಹೊಮ್ಮಿದ " ಹರಿಕಥಾಮೃತಸಾರ " ದ ಕೆಲವು ಸಂಧಿಗಳನ್ನು ಶ್ರೀ ದಾಸಾರ್ಯರ ಪರಮಾನುಗ್ರಹ ಬಲದಿಂದ ಬರೆದಿದ್ದರ ಫಲದಿಂದ ಶ್ರೀ ಶ್ಯಾಮಸುಂದರದಾಸರಾಗಿ ಅವತರಿಸಿದ್ದಾರೆ ಎಂಬುದನ್ನು ಈ ಕೆಳಗಿನ ಪ್ರಮಾಣಗಳು ಖಚಿತ ಪಡಿಸಿವೆ.

ಶ್ರೀ ವಿಜಯಸಾರಥಿ ವಿಠಲರು....

ಹರಿಕಥಾಮೃತ ವಕ್ತಾರಃ ।<br>
ಪರಮಾನುಗ್ರಹ ಸೂನುವೇ ।<br>
ವರ ಕವಿ ಪಂಡಿತಾಚಾರ್ಯ ನಮೋ ನಮಃ ।।

ಶ್ರೀ ಶ್ರೀಕರ ವಿಠಲರು...

ಮಾನವಿಯಧಾಮರಾ ಪ್ರೇಮದಾ ಸೂನೂ ।<br>
ನೀನೆಂದು ಭಾವಿಸಿ ಸ್ತುತಿಪ ಜನರನ್ನು ತಾನೇ ।<br>
ಶ್ರೀಕರವಿಠ್ಠಲ ಪೊರೆಯುವನು ವರ ಕಾಮಧೇನು ।।

ಶ್ರೀ ತಂದೆ ವೆಂಕಟೇಶ ವಿಠಲರು...

ಮಾನವೀ ಗುರುವ ಪ್ರಸೂನ ಷಟ್ಚರಣ ಕವಿ ।
ಭಾನು ಹೃದ್ಯಾನವದ್ಯಾಭಿಮನ್ಯು ।
ಪ್ರಾಣ ಪ್ರಿಯ ತಂದೆ ವೆಂಕಟೇಶವಿಠಲನ್ನ ಪದ ।
ರೇಣಿನವನಿವನೆಂದು ಸುಮುಖನಾಗೋ ।।

ಶ್ರೀ ಶ್ಯಾಮ ಸುಂದರ ದಾಸರೇ ತಾವು ಶ್ರೀ ಜಗನ್ನಾಥದಾಸರ ಪುತ್ರರೆಂದು ಈ ಕೆಳಕಂಡ ಪ್ರಮಾಣಗಳಿಂದ ಸ್ಪಷ್ಟ ಪಡಿಸಿದ್ದಾರೆ.

ಭೋ ದಾತಾ ಬಾರೋ ಗುರುವರ್ಯ ।। ಪಲ್ಲವಿ ।।

ನಂಬಿದೆ ನಾ ನಿನ್ನ ಪಾದ ಭೂನಾಥ ದಾಸಾಗ್ರಣೀ ।। ಅ. ಪ ।।

... ಪೋತನೋಳೀಪರಿ ಯಾತಕೆ ನಿರ್ದಯ ।
ತಾತನೆ ನಿಮಗಿದು ರೀತಿಯೇ ನೋಡ್ಯೆ ।
ಸುತನಪರಾಧವ ಹಿತದಲಿ ಮನ್ನಿಸಿ ।
ಪಾತಕ ಬಿಡಿಸೋ ಮತಿ ಬೀರೋ ।।

ಇನ್ನೊಂದು ಪದದಲ್ಲಿ.....

ಕರಾವ ಪಿಡಿ ಗುರುರಾಯಾ ।
ಶಿರ ಬಾಗಿ ಬೇಡುವೇ ।
ಪೊರೆಯೋ ಸತ್ಕವಿಗೇಯ ।।
ನೆರೆ ನಂಬಿದೆನೋ ನೀ ।
ಮರೆಯದಿರು ಶುಭ ಕಾಯ ಹೇ ।
ಸೂರಿವರ್ಯ ।। ಪಲ್ಲವಿ ।।

... ಮಂದ ನಾ ನಿಜವಯ್ಯಾ ।
ಸಂದೇಹವಿಲ್ಲದೇ ।
ಕುಂದು ಎಣಿಸದೆ ಜೀಯಾ ।
ಬಂದೆನ್ನ ಮನದಲಿ ।
ನಿಂದು ನೀ ಸಲಹಯ್ಯಾ ।
ವಂದಿಪೆನು । ಶ್ರೀ ಪು ।।
ರಂದರಾರ್ಯರ ಪ್ರಿಯಾ ।
ಆನಂದ ನಿಲಯಾ ।
ಅಂದು ಸ್ವಪ್ನದಿ ।
ವಚನವು ತಂದೆಯೇ ।
ಇಂದಿಲ್ಲಿ ಪೋಯಿತು ।
ನಂದ ನಂದನನಾದ । ಶ್ರೀ ಗೋ ।
ವಿಂದ ಶ್ಯಾಮಸುಂದರನ ವಿಧೇಯಾ ।।

ಮತ್ತೊಂದು ಕೃತಿಯಲ್ಲಿ....

ಮಾನಿತ ನಿನಗನು ।
ಮಾನವ್ಯಾತಕೆ ತವ ।
ಸೋನು ನಾನಲ್ಲವೇ ।
ಮಾನವಿ ನಿಲಯನೇ ।।

" ಶ್ರೀ ರಾಘವೇಂದ್ರತೀರ್ಥರ ಕಾರುಣ್ಯ "

ಅಂದಿನ ಸಮಾಜದಲ್ಲಿ ಸುಪ್ರಸಿದ್ಧರು ಶ್ರೀ ಪ್ರಹ್ಲಾದಾವತಾರಿಗಳಾದ ಶ್ರೀ ರಾಘವೇಂದ್ರತೀರ್ಥರಿ ಅತ್ಯಂತ ಪ್ರಿಯರಾದವರು ಶ್ರೀ ಅಹ್ಲಾದಾಂಶ ಶ್ರೀ ಗುರು ಜಗನ್ನಾಥದಾಸರು. ಶ್ರೀ ವಿಜಯರಾಯರ ಪರಂಪರೆಗೆ ಸೇರಿದ ಶ್ರೀ ಜಗನ್ನಾಥದಾಸರ ಪರಮಾನುಗ್ರಹಕ್ಕೆ ಪಾತ್ರರಾದ ಶ್ರೀ ಗುರು ಜಗನ್ನಾಥದಾಸಾರ್ಯರು " ಕೋಸಿಗಿ ಮುತ್ತ್ಯಾ " ಯೆಂಬ ಹೆಸರಿನಲ್ಲಿ ಎಲ್ಲಾ ಸಾತ್ವಿಕ ಜನ ಮಾನಸದಲ್ಲಿ ಗುರು ಸ್ಥಾನವನ್ನು ಪಡೆದಿದ್ದರು.

" ಹರಿಕಥಾಮೃತಸಾರ " ವನ್ನು ತಮ್ಮ ಪ್ರತಿ ರಕ್ತದ ಕಣದಲ್ಲೂ ತುಂಬಿಕೊಂಡ ಕೋಸಿಗಿ ಮುತ್ತ್ಯಾ ಅವರು ಶ್ರೀ ಜಗನ್ನಾಥದಾಸರ ದರ್ಶನಾಕಾಂಕ್ಷಿಗಳಾಗಿ ಮಾನವಿಗೆ ಬಂದರು. ಶ್ರೀ ದಾಸಾರ್ಯರ ಆಗಮನವನ್ನರಿತ ಶ್ರೀ ಶ್ಯಾಮಾಚಾರ್ಯ ದಂಪತಿಗಳು ತಮ್ಮ ಮಗನ ಕರೆತಂದು ಅವರ ಅಡಿದಾವರೆಗಳಲ್ಲಿಟ್ಟು ದುಃಖವನ್ನು ತೋಡಿಕೊಂಡರು.

ಶ್ರೀ ಗುರು ಜಗನ್ನಾಥದಾಸರು ಮಮತೆಯಿಂದ ಮಗುವಿನ ತಲೆಯ ಮೇಲೆ ಕೈಯಾಡಿಸುತ್ತಾ...

ಶ್ಯಾಮಾಚಾರ್ಯರೇ! ನಿಮ್ಮ ಮಗನು ಭಗವದನುಗ್ರಹದಿಂದ ನಿರಂತರ ಆಧ್ಯಾತ್ಮಿಕ ತತ್ತ್ವಗಳನ್ನಾಡಬಲ್ಲ ವರ ಕವಿಯಾಗುವನು. ಇವನು ಬೂದಿ ಮುಚ್ಚಿದ ಕೆಂಡ " ಎಂದು ಹರಿಸಿದರು.

ಶ್ರೀ ಗುರು ಜಗನ್ನಾಥದಾಸರ ಪರಮಾನುಗ್ರಹದಿಂದ ಗುಂಡಾಚಾರ್ಯರು ಕೆಲವೇ ತಿಂಗಳಗಳಲ್ಲಿ ಸ್ವಚ್ಛವಾಗಿ ಮಾತನಾಡಲು ಪ್ರಾರಂಭಿಸಿದನು .

" ಮೂಕೋಪಿಯತ್ಪ್ರಸಾದೇನ ಮುಕುಂದ ಶಯನಾಯತೇ.... "

ಎಂಬಂತೆ ಶ್ರೀ ರಾಘವೇಂದ್ರತೀರ್ಥರು ಹಾಗೂ ಶ್ರೀ ಜಗನ್ನಾಥದಾಸರು ಶ್ರೀ ಗುರು ಜಗನ್ನಾಥದಾಸರನ್ನು ಮಾಧ್ಯಮವನ್ನಾಗಿಟ್ಟುಕೊಂಡು ಗುಂಡಾಚರ್ಯರ ಮೇಲೆ ತೋರಿದ ಕಾರುಣ್ಯ. ಕಾರಣ ಶ್ರೀ ಪ್ರಹ್ಲಾದರಾಜರೇ ಶ್ರೀ ರಾಘವೇಂದ್ರತೀರ್ಥರು - ಶ್ರೀ ಸಹ್ಲಾದರಾಜರೇ ಶ್ರೀ ಜಗನ್ನಾಥದಾಸರು - ಶ್ರೀ ಆಹ್ಲಾದರಾಜರೇ ಶ್ರೀ ಗುರು ಜಗನ್ನಾಥದಾಸರು ಮತ್ತು ಶ್ರೀ ಜಗನ್ನಾಥದಾಸರ ಪುತ್ರರಾದ ಶ್ರೀ ದಾಮೋದರದಾಸರೇ ಶ್ರೀ ಶ್ಯಾಮಸುಂದರದಾಸರಾಗಿ ಅವತಾರ ಮಾಡಿದ್ದಾರೆಂದ ಮೇಲೆ ಜ್ಞಾನಿತ್ರಯರ ಕಾರುಣ್ಯಕ್ಕೆ ವಿಶೇಷವಾಗಿ ಪಾತ್ರರಾದವರು ಶ್ರೀ ಗುಂಡಾಚಾರ್ಯರು!!

" ಅಂಕಿತ ಪ್ರದಾನ "

ಅದೊಂದು ಶುಭ ಸಮಯ. ಶ್ರೀ ಗುಂಡಾಚಾರ್ಯರ ಸ್ವಪ್ನದಲ್ಲಿ ಶ್ರೀ ಜಗನ್ನಾಥದಾಸರು ಕಾಣಿಸಿಕೊಂಡು " ಶ್ಯಾಮಸುಂದರವಿಠಲ " ಎಂಬ ಅಂಕಿತ ನಾಮವನ್ನು ಕರುಣಿಸಿ ಅನುಗ್ರಹಿಸಿದರು. ಶ್ರೀ ಗುಂಡಾಚಾರ್ಯರ ವದನಾರವಿಂದದಿಂದ ಭಗವನ್ಮಹಿಮಾ ಪ್ರತಿಪಾದಕವಾದ; ವೇದಾಂತ ರಹಸ್ಯಗಳಿಂದ ಕೂಡಿದ ಕವಿತಾ ತರಂಗಿಣಿಯು ಹೊರಹೊಮ್ಮಿತು. ಅಂದಿನಿಂದ ಶ್ರೀ ಗುಂಡಾಚಾರ್ಯರು " ಶ್ರೀ ಶ್ಯಾಮಸುಂದರವಿಠಲ " ರೆಂದು ಪ್ರಸಿದ್ಧಿಯಾದರು.

" ವರ ಕವಿಗಳಿಂದ ವರ ಕವಿಗಳಿಗೆ ಸ್ವಾಗತ "

ಕವಿ ದ ರಾ ಬೇಂದ್ರೆಯವರನ್ನು ಕುರಿತ ಹಾಡು ಸುಂದರವಾಗಿದೆ. ಮಾನವಿಯಲ್ಲಿ ಜರುಗಿದ ಸಾಹಿತ್ಯ ಸಮ್ಮೇಳನಕ್ಕೆ ಬರುವಂತೆ ವ್ಯವಸ್ಥಾಪಕರು ಮಾಡಿಕೊಂಡ ಮನವಿಯನ್ನು ಕವಿ ಬೇಂದ್ರೆಯವರು ಮನ್ನಿಸದಿದ್ದುದಕ್ಕೆ ಇಡೀ ಸಮ್ಮೇಳನದ ಉತ್ಸಾಹವು ಕುಗ್ಗಿದ್ದನ್ನರಿತ ಶ್ರೀ ಶ್ಯಾಮಸುಂದರದಾಸರು ಕವಿ ಬೇಂದ್ರೆಯವರಿಗೆ ಮಾನವಿಗೆ ಬರುವಂತೆ ಆಹ್ವಾನಿಸಿ ಒಂದು ಸ್ವಾಗತ ಪದವನ್ನು ಬರೆದು ಧಾರವಾಡಕ್ಕೆ ಕಳುಹಿಸಿದರು. ಸ್ವಾಗತ ಪದದಲ್ಲಿ ನಿರೂಪಿತ ಸಾಹಿತ್ಯ ಸತ್ವವನ್ನು ಓದಿದ ಕವಿ ಬೇಂದ್ರೆಯವರು ಕೂಡಲೇ ಮಾನವಿಗೆ ಬಂದು ಕಾರ್ಯಕ್ರಮದಲ್ಲಿ ಭಾಗವಹಿಸಿದರು.

ಸತ್ಕವೀಂದ್ರ ಬಾ ಬೇಂದ್ರೆ ಸುಗುಣ ಸಾಂದ್ರ ।। ಪಲ್ಲವಿ ।।

ನಮ್ಮ ಮಾನವಿ ಸ್ಥಳದಿ ಅಚ್ಚಗನ್ನಡದ ನುಡಿಯ ।
ಸಮ್ಮಿಲನ ಸಾಗಿಸಲು ನಿಶ್ಚಯಿಸಿದೆ ।
ನಿಮ್ಮ ಬರುವಿಕೆ ಬಯಕೆ ।।

ಇಮ್ಮಡಿಸಿಹುದೆಮಗೆ ।
ಸಮ್ಮತಿಸಿ । ಬಾರ ।
ಯ್ಯ ಸತ್ಕವೀಂದ್ರ ಶ್ರೀ ಬೇಂದ್ರೆ ಸುಗುಣೇಂದ್ರ ।। ಚರಣ ।।

... ಪ್ರೇಮದಿಂದಲಿ ನಿನ್ನ ಕಾಮಿತಾರ್ಥವಗರೆದು ।
ಶ್ಯಾಮಸುಂದರವಿಠಲ ಸಲಹೋ ಎಂದು ।
ನಾಮದಡಿ ಪ್ರಾರ್ಥಿಸುವೆ ನೀ ಮಾಡ್ವ ಉಪಕಾರ ।।

" ಶ್ರೀ ಜಗನ್ನಾಥದಾಸರೇ ಸಾರಸರ್ವಸ್ವ "

ಅನೇಕ ತೀರ್ಥ ಕ್ಷೇತ್ರಗಳನ್ನು ಸಂದರ್ಶಿಸಿದ ಇವರಿಗೆ ಮಾನವಿಯಲ್ಲಿ ಎಲ್ಲಿಲ್ಲದ ಅಭಿಮಾನ. ಅದೇ ಅವರ ಪಾಲಿಗೆ ಸಕಲ ತೀರ್ಥ ಕ್ಷೇತ್ರಗಳ ಪವಿತ್ರ ನಿಲಯ. ಇದಕ್ಕೆ ಒಡೆಯರಾದ ಶ್ರೀ ಜಗನ್ನಾಥದಾಸರೇ ಇವರ ಪಾಲಿಗೆ ತಂದೆ, ತಾಯಿ, ಬಂಧು, ಬಳಗ, ಗುರು, ದೈವ ಎಲ್ಲವೂ ಆಗಿದ್ದಾರೆ. ಶ್ಯಾಮಸುಂದರದಾಸರು ತಮ್ಮ ಒಂದು ಸುಳಾದಿಯಲ್ಲಿ....

ಇವರ ಸಂದರುಶನ ಭಾವ ಬಂಧ ಮೋಚನ । ಇವರ ಚರಣ ಧ್ಯಾನ ಗಂಗಾ ಸ್ನಾನ । ಇವರನ್ನ ಸಾರಿದರೆ ಜವಾನ ಅಂಜಿಕೆಯುಯಿಲ್ಲ । ಇವರ ಕವನ ಸ್ತವನ ಶ್ರವಣದಿಂದ । ಪವನ ಸಚ್ಛಾಸ್ತ್ರದ ಪವಚನ ಫಲವಕ್ಕು ।ಇವರಿಪ್ಪ ಸ್ಥಳ ಕಾಶೀ ರಾಮೇಶ್ವರ । ಇವರಲ್ಲಿ ಸಮಸ್ತ ದಿವಿಜರು ನೆಲೆಸಿದ್ದು । ಇವರಿಂದ ವಚನವ ನಡೆಸುವರು । ಇವರಿಲ್ಲಿರಲು ಬಿಟ್ಟು ಅವನಿ ಸುತ್ತಿದವರಿಗೆ । ಆವಲೇಶವಾದರೂ ಪುಣ್ಯವಿಲ್ಲ । ಇವರನುಗ್ರಹವಾಗೆ ಶ್ರೀ ಶ್ಯಾಮಸುಂದರರನು । ತವಕದಿಂದ ಕರ ಪಿಡಿದು ಸಲಹುವ ಸರ್ವದಾ ।।

" ನಿರ್ಯಾಣ "

ಪೂರ್ಣವಾದ ಹರಿದಾಸ ಸಾಹಿತ್ಯದ ಭಾಂಡಾಗಾರವನ್ನು ತಮ್ಮ ಕೃತಿ ರತ್ನಗಳಿಂದ ಪೂರ್ಣ ಮಾಡಿದ ಮಹನೀಯರು. ನಿಗೂಢವಾದ ಸಾಧನೆಯನ್ನು ಮಾಡಿ ಕಾರಣ ಜನ್ಮರಾದ ಶ್ರೀ ಶ್ಯಾಮಸುಂದರದಾಸರು ದುರ್ಮುಖಿ ನಾಮ ಸಂವತ್ಸರದ ವೈಶಾಖ ಶುದ್ದ ನವಮೀ ಶುಕ್ರವಾರ ವೈಕುಂಠಕ್ಕೆ ತೆರಳಿದರು.

ರಾಗ : ಭೈರವಿ ತಾಳ : ಆದಿ

ತೆರಳಿದರು ತೆರಳಿದರು ಹರಿಯ ಪುರಕೆ ।
ಪುರ ಬಲ್ಲಟಗಿಯ ವರಕವಿ ಶ್ಯಾಮಸುಂದರರು ।। ಪಲ್ಲವಿ ।।

ವೀರ ವೈಷ್ಣವರಲ್ಲಿ ಜನಿಸುತಲಿ ಮಾನವಿಯ ।
ಧಾರುಣಿಪ ದಾಸರ ಒಲಿಮೆ ಪಡೆದು ।
ಈರ ಮತ ತತ್ತ್ವಗಳ ।
ಪಾರ ಮಹಿಮೆಗಳ ಚಾರು ಪದ ಪದ್ಯದಿಂ ।
ಸಾರಿ ನಲಿದವರು ।। ಚರಣ ।।

ಮೂಕ ಬಧಿರರ ತೆರದಿ ।
ಲೋಕಕ್ಕೆ ತೋರುತಲಿ ।
ಕಾಕು ವೃತ್ತಿಗಳನು ನೂಕಿ ಮೆಟ್ಟಿ ।
ಈ ಕುಂಭಿಣಿಯೊಳು ।
ಸಾಕೆಂದು ತ್ವರಿತದಲಿ ।

ಕಾಕೋದರಾಗ್ರಾಜನ ನಾಮ ಘರ್ಜನೆಗೈದು ।। ಚರಣ ।।

ದುರ್ಮುಖ ಸಂವತ್ಸರದಿ । ವೃಷ ।
ಭ ಮಾಸದ । ಶು ।
ಕ್ಲ ಮೂರು ತಿಥಿ ಶುಕ್ರವಾರ ಹಗಲು ।
ನಿರ್ಮಲಾನಂದದಿ ಲಯವನ್ನು ಚಿಂತಿಸುತ ।

ಭರ್ಮಪಿತ ಅಭಿನವ ಪ್ರಾಣೇಶವಿಠಲನ್ನ ನೆನೆಯುತ ।। ಚರಣ ।।

ಜಗನ್ನಾಥ ಗುರೋರ್ದಾಸಂ ಜಗದಾನಂದಕಾರಕಂ ।
ಶ್ಯಾಮಸುಂದರದಾಸಾರ್ಯಂ ವಂದೇ ಸುಜ್ಞಾನದಾಯಕಮ್ ।।

ಗುರು ವಿಜಯ ಪ್ರತಿಷ್ಠಾನ

" ಶ್ರೀ ಶ್ಯಾಮಸುಂದರ - 2 "

"ಶ್ರೀ ರಾಯರ, ಶ್ರೀ ಮಾನವಿರಾಯರ ಆಪ್ತರು ವರಕವಿ ಶ್ರೀ ಶ್ಯಾಮ ಸುಂದರ ದಾಸರು"

ದಿನಾಂಕ : 13.05.19 ಸೋಮವಾರ ಶ್ರೀ ಶ್ಯಾಮಸುಂದರದಾಸರ ಆರಾಧನಾ ಮಹೋತ್ಸವ!!!

" ಶ್ರೀ ಶ್ಯಾಮಸುಂದರದಾಸರ ನುಡಿಮುತ್ತುಗಳಲ್ಲಿ ಶ್ರೀ ರಾಘವೇಂದ್ರತೀರ್ಥರು "

ರಾಯಚೂರು ಜಿಲ್ಲೆಯ ಮಾನವಿ ತಾಲೂಕಿನ " ಬಲ್ಲಟಗಿ " ಗ್ರಾಮವು ಶ್ರೀ ಶ್ಯಾಮಸುಂದರದಾಸರ ಜನ್ಮಸ್ಥಳ. ಇವರು ಶ್ರೀ ಮಾನವಿ ಮುನಿಪುಂಗವರಾದ ಶ್ರೀ ಸಹ್ಲಾದಾಂಶ ಜಗನ್ನಾಥದಾಸರ ಮತ್ತು ಶ್ರೀ ಪ್ರಹ್ಲಾದಾಂಶ ಶ್ರೀ ರಾಘವೇಂದ್ರತೀರ್ಥರ ಅಂತರಂಗ ಭಕ್ತರೂ ಹಾಗೂ ಅವರ ಪೂರ್ಣಾನುಗ್ರಹಕ್ಕೆ ಪಾತ್ರರಾದವರು.

ಶ್ರೀ ಶ್ಯಾಮಸುಂದರದಾಸರ ಕೃತಿಗಳು ಭಕ್ತಿಭಾವದಿಂದ ತುಂಬಿ ತುಳುಕುತ್ತಿರುವ ಇವರ ರಚನಾ ಶೈಲಿ ಶ್ರೀ ದಾಸರ ಹೆಸರಿಗೆ ತಕ್ಕಂತೆ ಸುಂದರವಾದ ಪದ ಸಮುಚ್ಛಯಗಳಿಂದ ಕೂಡಿ ಅರ್ಥಗರ್ಭಿತವಾಗಿವೆ.

ಶ್ಲೇಷಾರ್ಥಗಳನ್ನು ಒಳಗೊಂಡ ಅನೇಕ ಪದ ಪ್ರಯೋಗಗಳಿಂದ ಕೂಡಿದ ಇವರ ಪದಗಳನ್ನು ಅರ್ಥಾನುವಾದ ಮಾಡಲು ಶಾಸ್ತ್ರ ಮತ್ತು ಪುರಾಣ ಜ್ಞಾನವು ಅತ್ಯವಶ್ಯಕವಾಗಿದೆ.

ಈ ಮೊದಲೇ ಹೇಳಿದಂತೆ ಶ್ರೀ ಶ್ಯಾಮಸುಂದರದಾಸರಿಗೆ ಶ್ರೀ ರಾಯರನ್ನು ಕಂಡರೆ ಅತ್ಯಂತ ಪ್ರೀತಿ. ಶ್ರೀ ರಾಯರ ಮೂಲ ಬೃಂದಾವನದ ಮುಂದೆ ನಿಂತರೆ ಸಾಕು ಶ್ರೀ ಶ್ಯಾಮಸುಂದರದಾಸರ ವದನಾರವಿಂದದಲ್ಲಿ ಶ್ರೀ ರಾಯರ ಅಗಣಿತ, ಅತಿಶಯವಾದ ಮಹಿಮೆಗಳು ಗಂಗಾ ಪ್ರವಾಹದಂತೆ ಹರಿಯುತ್ತದೆ.

ರಾಗ : ದುರ್ಗಾ ತಾಳ : ಆದಿ

ಎಂಥ ದಯವಂತನೋ ಮಂತ್ರಮುನಿ ನಾಥನೋ ।
ಸಂತತದಿ ತನ್ನನು ಚಿಂತಿಪರಿಗೆ ಸುರಧೇನು ।। ಪಲ್ಲವಿ ।।

ವರ ಪ್ರಹ್ಲಾದನೂ ಮರಳಿ ಬಾಹ್ಲೀಕನೋ ।
ಗುರು ವ್ಯಾಸರಾಯನೋ ,ಪರಿಮಳಾಚಾರ್ಯನೋ ।। ಚರಣ ।।

ಇರುವ ತುಂಗಾ ತಟದಲ್ಲಿ ಬರುವ ತಾನು ಕರೆದಲ್ಲಿ ।
ಕರವ ಪಿಡಿದು ಪೊರೆವಲ್ಲಿ ಸರಿಗಾಣೆ ಧರೆಯಲ್ಲಿ ।। ಚರಣ ।।

ಮರುತಾವೇಶಯುಕ್ತನು ದುರಿತ ಕಳೆವ ಶಕ್ತನು ।
ತರಣಿ ನಿಭಗಾತ್ರನು ಪರಮ ಸುಚರಿತ್ರನು ।। ಚರಣ ।।

ಶಿಶುವಿಗಸುವಗರೆದನು ವಸುಧಿ ಸುರರ ಪೊರೆದನು ।
ಅಸಮ ಮಹಾ ಮಹಿಮನೋ ಸುಶೀಲೇಂದ್ರ ವರದನೋ ।। ಚರಣ ।।

ಭೂಮಿಯೊಳು ಖ್ಯಾತನು ಶ್ಯಾಮಸುಂದರ ಪ್ರೀತನು ।
ಕಾಮಿತಾರ್ಥದಾತನು ಸ್ವಾಮಿ ನಮಗೆ ಈತನು ।। ಚರಣ ।।

" ಪ್ರಮಾಣ "

ಶ್ರೀ ನೃಸಿಂಹ ಪುರಾಣ....

ಶಂಖುಕರ್ಣಾಖ್ಯ ದೇವಸ್ತು ಬ್ರಹ್ಮ ಶಾಪಾಶ್ಚ ಭೋತಲೇ ।
ಪ್ರಹ್ಲಾದ ಇತಿ ವಿಖ್ಯಾತೋ ಭೂಭಾರ ಕ್ಷಪಣೇ ರತಃ ।।
ಸ ಏವ ರಾಘವೇಂದ್ರಾಖ್ಯ ಯತಿ ರೂಪೇಣ ಸರ್ವದಾ ।

ಕಲೌಯುಗೇ ರಾಮಸೇವಾಂ ಕುರ್ವನ್ ಮಂತ್ರಾಲಯೇ ಭವೇತ್ ।।

ಪ್ರಹ್ಲಾದೋ ಜನ್ಮ ವೈಷ್ಣವಃ ।।

ಶ್ರೀ ಬ್ರಹ್ಮಾಂಡಪುರಾಣದಲ್ಲಿ...

ಪ್ರಹ್ಲಾದೋಪಿ ಮಹಾಭಾಗಃ ಕರ್ಮದೇವ ಸಮಃ ಸ್ಮೃತಃ ।

ಪ್ರಹ್ಲಾದೋ ನಿತ್ಯ ಭಕ್ತಿಮಾನ್ ।।

" ಶ್ರೀಮದ್ಭಾಗವತ ಮಹಾ ಪುರಾಣ "

ವಾಸುದೇವೇ ಭಗವತಿ ಯಸ್ಯ ನೈಸರ್ಗಿಕೀರತಿಃ ।
ಬ್ರಹ್ಮಣ್ಯಃ ಶೀಲ ಸಂಪನ್ನಃ ಸತ್ಯಸಂಧೋ ಜಿತೇಂದ್ರಿಯಃ ।
ಪ್ರಶಾಂತಕಾಮೋ ರಹಿತಾಸುರೋಸುರಃ ।।
ಮಹದರ್ಭಕಃ ಮಹದುಪಾಸಕಃ ನಿರ್ವೈರಾಯ ಪ್ರಿಯ ಸುಹೃತ್ತಮಃ ।

" ಶ್ರೀ ಗರುಡಪುರಾಣದ ಬ್ರಹ್ಮಕಾಂಡ " ದಲ್ಲಿ.....

ಮಾನಸ್ತಂಭ ವಿವರ್ಜಿತಃ ಯಥಾ ಭಗವತೀಶ್ವರೇ ।।
ಪ್ರಕೃಷ್ಟಾಹ್ಲಾದ ಯುಕ್ತತ್ವಾತ್ ನಾರದಸ್ಯೋಪದೇಶತಃ ।
ಅತಃ ಪ್ರಹ್ಲಾದ ನಾಮಾಸೌ ಪೃಥುವ್ಯಾಂ ಖಗಸತ್ತಮಃ ।।

" ಸೂತ್ರ ಭಾಷ್ಯ " ದಲ್ಲಿ....

ದೇವಾಃ ಶಾಪ ಬಲದೇವ ಪ್ರಹ್ಲಾದಾದಿತ್ವಮಾಗತಾಃ ।
ದೇವಾಃ ಶಾಪಾಭಿಭೂತತ್ವಾತ್ ಪ್ರಹ್ಲಾದಾದ್ಯ ಬಭೂವಿರೇ ।।

" ಯಜುರ್ವೇದ ಬ್ರಾಹ್ಮಣ ೫ನೇ ಖಂಡ "

ಪ್ರಹ್ಲಾದೋ ವೈ ಕಯಾಧವಃ ವಿರೋಚನಂ ಸ್ವಪುತ್ರಂ ಅಪನ್ಯಧತ್ತ ।।

" ಶ್ರೀ ಸ್ಕಂದ ಪುರಾಣ " ದಲ್ಲಿ..

ಋತೇತು ತಾತ್ವಿಕಾ್ ದೇವನ್ನಾರದಾದೀನಥೈವ ಚ ।
ಪ್ರಹ್ಲಾದಾದುತ್ತಮಃ ಕೋನು ವಿಷ್ಣು ಭಕ್ತೌ ಜಗತ್ರಯೇ ।।

" ಶ್ರೀ ಪ್ರಹ್ಲಾದರಾಜರಿಗೆ ಜಗನ್ನಾಥನಾದ ಶ್ರೀ ನೃಸಿಂಹನ ಪರಮಾದ್ಭುತ ವಚನ "

ಶ್ರೀ ಮದ್ಭಾಗವತ ಮಹಾ ಪುರಾಣದಲ್ಲಿ....

ವತ್ಸ! ಯದ್ಯದಭೀಷ್ಟಂತೇ ತತ್ತದಸ್ತು ಸುಖೀಭವ ।
ಭವಂತಿ ಪುರುಷಾ ಲೋಕೇ ಮದ್ಭಾಕ್ತಾಸ್ತ್ವಾಮನುವ್ರತಾಃ ।
ತ್ವಂ ಚ ಮಾಂ ಚ ಸ್ಮರೇಕಾಲೇ ಕರ್ಮಬಂಧಾತ್ಪ್ರಮುಚ್ಯತೇ ।।

" ಶ್ರೀ ಪ್ರಹ್ಲಾದರೇ ಬಾಹ್ಲೀಕರಾಜರು " ....

ಶ್ರೀಮದಾಚಾರ್ಯರು - ಮ ಭಾ ತಾ ನಿ - ೧೧ - ೮

ಬಾಹ್ಲೀಕೋರಾಜ ಸತ್ತಮಃ ಹಿರಣ್ಯಕಶಿಪೋ ಪುತ್ರಃ ।

ಪ್ರಹ್ಲಾದಃ ಭಗವತ್ಪ್ರಿಯಃ ವಾಯೂನಾ ಚ ಸಮಾವಿಷ್ಟಃ ।।

" ಶ್ರೀ ಪ್ರಹ್ಲಾದರೇ ಶ್ರೀ ವ್ಯಾಸರಾಜರು ".....

ಶ್ರೀಪುರಂದರದಾಸರು....

ಶೇಷಾವೇಶ ಪ್ರಹ್ಲಾದನವತಾರ ವೆನಿಸಿದೆ । ವ್ಯಾಸರಾಯನೆಂಬೋ ಪೆಸರು ನಿನಗಂದಂತೆ । ದೇಶಾಧಿಪಗೆ ಬಂದ ಕುಹೂ ಯೋಗವನು ನೂಕಿ । ನೀ ಸಿಂಹಾಸನವೇರಿ ಮೆರೆದೆ ಜಗವರಿಯೇ । ವ್ಯಾಸಾಬ್ಧಿಯನು ಬಿಗಿಸಿ ಕಾಶಿ ದೇಶದೊಳೆಲ್ಲ । ಭಾಸುರ ಕೀರ್ತಿಯನು ಪಡೆದೆ ನೀ ಗುರುರಾಯ । ವಾಸುದೇವ ಪುರಂದರ ವಿಠ್ಠಲನ್ನ ದಾಸರೊಳು । ಲೇಶ ನಿನ್ನಂತೆ ವೆಗ್ಗಳರ ಕಾಣೆನು ನಾನು ।।

ಶ್ರೀ ಕನಕದಾಸರು....

ವ್ಯಾಸರಾಯರಿಗೆ ಮೂರು ಜನ್ಮ । ( ಶ್ರೀ ಪ್ರಹ್ಲಾದ - ಶ್ರೀ ಬಾಹ್ಲೀಕ - ಶ್ರೀ ವ್ಯಾಸರಾಜರು ), ದಾಸರಿಗೆ ಎರಡು ಜನ್ಮ । ( ಮಹಾಭಾರತದಲ್ಲಿನ ಶ್ರೀ ವಿದುರ ಮತ್ತು ಶ್ರೀ ಕನಕದಾಸರು ), ಶ್ರೀ ವ್ಯಾಸರಾಯರೇ ರಾಘವೇಂದ್ರರಾಯರು ( ಶ್ರೀ ವ್ಯಾಸರಾಜರ ಮುಂದಿನ ಅವತಾರವೇ ಶ್ರೀರಾಯರು ), ರಾಮಚಂದ್ರನ ಆಶ್ರಿತ ಜನ ಕೋಟಿಯೊಳಗೆ । ಉತ್ಕೃಷ್ಟರಾದವರು । ನಾರದರ ಅಂಶವೇ ಪುರಂದರ ದಾಸರು । ತಮ್ಮ ಕೂಸಾದ ಭೃಗು ಮುನಿಯಲ್ಲಿ । ತಾವು ಒಂದು ಅಂಶದಿ ನಿಂದು ವಿಜಯದಾಸರೆಂದು ಪೆಸರು ಪಡೆವ । ನಾ ಯಮನು ಮುಂದೆ ಮಾಂಡವ್ಯ ಶಾಪದಿಂದ ಎರಡು ಜನ್ಮ ಶೂದ್ರ ಯೋನಿಯಲ್ಲಿ ಪೊಕ್ಕೆನಲು । ಒಂದು ಜನುಮ ವಿದುರನಾಗಿ ಕುರುಬ ಕುಲದಲ್ಲೀಗ ಪುಟ್ಟಿದೆ । ಎನಗೆ ಈ ಜನ್ಮದಲ್ಲಿ ಮುಕುತಿ ಎಂತೆಂಬೆ । ವರದಪ್ಪನೇ ಸೋಮ । ಗುರುರಾಯ ದಿನಕರನು । ಅಭಿನವ ಬೃಹಸ್ಪತಿ । ಮಧ್ವಪತಿ ಭೃಗು ಅಂಶದಿ ಮೆರೆವ । ಮಹಾ ಮಹಿಮೆ ಪೊಗಳುವೆನು । ಭಾಗವತರೊಳು ಯೋಗೀಂದ್ರ ಕೃಷ್ಣನ್ನ । ಬಾಗಿ ನಮಿಸುವ ದಾಸ ಜನರ ಪೋಷಕ ಕಾಗಿನೆಲೆಯಾದಿ ಕೇಶವರಾಯ । ದಾಸೋತ್ತಮರ ಗುಣವನ್ನು ಕನಕದಾಸ ಪೇಳಿದನು ।।

ಶ್ರೀ ವಿಜಯೀಂದ್ರತೀರ್ಥರು ಶ್ರೀ ವ್ಯಾಸರಾಜ ಸ್ತೋತ್ರದಲ್ಲಿ....

ಪ್ರಹ್ಲಾದಸ್ಯಾವತಾರೋ ಸಾವೀಂದ್ರಸ್ಯಾನುಪ್ರವೇಶನಾತ್ ।
ತೇನ ಸರ್ತ್ವೇವಿನಾಂ ನೃಣಾಂ ಸರ್ವಮೇತದ್ಭವೇ ಧ್ರುವಮ್ ।।

ಶ್ರೀ ವಿಜಯರಾಯರು....

ವೃಕೋದರನಿಂದ ನೊಂದು ದೇಹವನು ಬಿಡುವಾಗ । ಬಾ । ಹ್ಲೀಕ ರಾಯನಾಗಿ ಹುಟ್ಟಿದ್ದ ಪ್ರಹ್ಲಾದ । ತಾ ।
ನುಕುತಿಯಲಿ ಪೊಗಳಿ ವರವ ಬೇಡಿದನು ವೈದಿಕ ಮಾರ್ಗವನೇ ಪಿಡಿದು ।। ಉಕಿತಿಯನು ಸಾಧಿಸುತ ಕಲಿಯೊಳಗೆ ನಿಮ್ಮ । ಪೂ । ಜಕನಾಗಿ ಬಾಳುವೆನು ಎಂದು ತಲೆವಾಗಿದನು । ಭಕುತಿಗೆ ಮೆಚ್ಚಿ ಕೈಸಲೆ ಎಂದ ಮಾತಿಂದು ಪ್ರಕಟವಾಯಿತು ಧರೆಯೊಳು ।।

" ಶ್ರೀ ಪ್ರಹ್ಲಾದರೇ ಶ್ರೀ ರಾಘವೇಂದ್ರತೀರ್ಥರು "

ಶ್ರೀ ಗೋಪಾಲದಾಸರು...

ಶೇಷಾಂಶ ಪ್ರಹ್ಲಾದ ವ್ಯಾಸ ಮುನಿಯೇ ರಾಘವೇಂದ್ರ ।
ಈ ಸುಬಗೆ ಪುಣ್ಯ ಇವರಿಗೆ ಕೇಶವನೆ ತಾ ಮಾಡಿಸಿ ।।

ಪ್ರಥಮ ಪ್ರಹ್ಲಾದ ವ್ಯಾಸ ಮುನಿಯೇ ।
ಯತಿ ರಾಘವೇಂದ್ರ ।।

ಶ್ರೀ ಪ್ರಾಣೇಶದಾಸರು...

ರಾಯರ ನೋಡಿರಿ ಗುರು ರಾಯರ ಪಾಡಿರೈ ।

ಸಿರಿ ಪ್ರಹ್ಲಾದ ವರ ಬಾಹ್ಲೀಕ ಗುರು ವ್ಯಾಸ ರಾಘವೇಂದ್ರ ।।

ಶ್ರೀ ಶ್ರೀಕರವಿಠಲರು...

ಸಹ್ಲಾದಣ್ಣನಣ್ಣ ಬಾರೋ । ಪ್ರಹ್ಲಾದರಾಜಾ ।
ಬಾಹ್ಲೀಕ ವ್ಯಾಸನಾಗಿ ಉಹ್ಲಾಸದಿಂದ ಬಾರೋ ।।
ರಾಜ ಬಾರೋ ಗುರುರಾಜ ಬಾರೋ ।
ರಾಜಾಧಿರಾಜ ಗುರುರಾಜ ಬಾರೋ ।।

" ಶ್ರೀ ವಾಯುದೇವರ ನಿತ್ಯಾವೇಶಯುಕ್ತರು ಶ್ರೀ ರಾಘವೇಂದ್ರತೀರ್ಥರು "

" ಬ್ರಹ್ಮಕಾಂಡ "

ವಾಯೂನಾ ಚ ಸಮಾವಿಷ್ಟಂ ಹರೇಃ ಪಾದಾಬ್ಜ ಸಂಶಯಂ ।

ಶ್ರೀಮದಾಚಾರ್ಯರು....

ವಾಯೂನಾ ಚ ಸಮಾವಿಷ್ಟಃ ಮಹಾಬಲ ಸಮನ್ವಿತಃ ।
ಪ್ರಹ್ಲಾದಾದುತ್ತಮಃ ಕೋನು ವಿಷ್ಣು ಭಕ್ತೌ ಜಗತ್ತ್ರಯೇ ।।
ಕೃಷ್ಣಗ್ರಹಗ್ರಹೀತಾತ್ಮ....... ಪ್ರಹ್ಲಾದೋ ನಿತ್ಯ ಭಕ್ತಿಮಾನ್ ।।

ವಾಯೂನಾ ಚ ಸಮಾವಿಷ್ಟಃ ಮಹಾಬಲ ಸಮನ್ವಿತಃ । ಎಂದರೆ ವಾಯೂನಾಚ ನಿತ್ಯ ಸಮಾವಿಷ್ಟತ್ವಾತ್

ಪ್ರಹ್ಲಾದೋ ನಿತ್ಯ ಭಕ್ತಿಮಾನ್ ।

" ನಿತ್ಯ " ಪದಕ್ಕೆ ಅರ್ಥವೇನೆಂದರೆ..

ಅವರ ಮುಂದಿನ ಅವತಾರಗಳಾದ ಶ್ರೀ ಬಾಹ್ಲೀಕ - ಶ್ರೀ ವ್ಯಾಸರಾಜ - ಶ್ರೀ ರಾಘವೇಂದ್ರತೀರ್ಥರು. ಇವರಲ್ಲೂ ಸಹಾ ಶ್ರೀ ವಾಯುದೇವರು ನಿತ್ಯಾವೇಶದಿಂದ ಇರುತ್ತಾರೆಂದು ಸ್ಪಷ್ಟ!

ಇನ್ನೊಂದು ಪದದಲ್ಲಿ....

ರಾಗ : ಹಂಸಾನಂದೀ ತಾಳ : ಆದಿ

ರಾಯರೇ ಗತಿಯು ನಮಗೆ ।
ವಾಯುಸುಮತೋದ್ಧಾರ ಶ್ರೀ ರಾಘವೇಂದ್ರ ಗುರು ।। ಪಲ್ಲವಿ ।।

ಶುಕ ಪಿಕ ಮೊದಲಾದ ವಿಕುಲಕ್ಕೆ ಮಧುರ ಫಲ ।
ಯುಕುತಮಾಗಿಹ ಚೂತ ಸುಕುಜ ಗತಿಯೋ ।
ಮುಕುತಿಗೆ ಸುಜ್ಞಾನ ಭಕುತಿ ವಿರುಕುತಿ ಗತಿಯು ।
ಅಕಳಂಕ ಶ್ರೀಮಂತ ಮಂದಿರದಿ ನೆಲಸಿಪ್ಪ ।। ಚರಣ ।।

ಋಷಿಗಳಿಗೆ ಪ್ರಣವವೇ ಗತಿ ಝುಷಗಳಿಗೆ ಜಲವೇ ಗತಿ ।
ಸಸಿಗಳಭಿವೃದ್ಧಿಗೆ ಶಶಿಯೇ ಗತಿಯು ।
ಶಿಶುಗಳಿಗೆ ಜಲವೆ ಗತಿ ಪಶುಗಳಿಗೆ ತೃಣವೆ ಗತಿ ।
ಈಸು ಮಹಿಮೆಲಿ ಮೆರೆವ ಮಿಸುನಿ ಶಯ್ಯಜರಾದ ।। ಚರಣ ।।

ಕಾಮಿನೀ ಮಣಿಯರಿಗೆ ಕೈಪಿಡಿದ ಕಾಂತ ಗತಿ ।
ಭೂಮಿ ವಿಬುಧರಿಗೆ ಮಧ್ವ ಶಾಸ್ತ್ರ ಗತಿಯೋ ।

ತಾಮರಸ ಸಖ ಸುತನ ಭಯ ಪೋಪುವುದಕೆ । ಶ್ರೀ ।
ಶ್ಯಾಮಸುಂದರ ವಿಠ್ಠಲ ಸ್ವಾಮಿ ನಾಮವೇ ಗತಿಯೋ ।। ಚರಣ ।।

ವಿವರಣೆ :

ಶುಕ = ಗಿಳಿ
ಪಿಕ = ಕೋಗಿಲೆ
ವಿಕುಲ = ಪಕ್ಷಿ ಕುಲ
ಚೂತ ಸುಕುಜ = ಒಳ್ಳೆಯ ಮಾವಿನ ಮರ
ಪ್ರಣವ = ಓಂಕಾರ
ರುಷಗಳು = ಜಲಚರ ಪ್ರಾಣಿಗಳು
ಮಿಸುನಿಶಯ್ಯಜ = ಹಿರಣ್ಯಕಶಿಪುವಿನ ಮಗ
ತಾಮರಸ ಸಖ = ಕಮಲದ ಹೂವಿಗೆ ಮಿತ್ರನಾದ ಸೂರ್ಯ
ಸುತನ = ಯಮಧರ್ಮರಾಜರ
ಧಾಮ = ಪುರಕ್ಕೆ

ಶ್ರೀ ರಾಯರನ್ನು ಯಾರು ಅತ್ಯಂತ ಭಕ್ತಿ ಶ್ರದ್ಧೆಗಳಿಂದ ಪೂಜಿಸುತ್ತಾರೋ, ಭಜಿಸುತ್ತಾರೋ, ಶ್ರೀ ರಾಯರೇ ಗತಿಯೆಂದು ಸರ್ವ ಕಾಲಗಳಲ್ಲಿಯೂ ಸೇವಿಸುತ್ತಾರೋ ಅವರಿಗೆ ಶ್ರೀ ಯಮಧರ್ಮರಾಜರ ಭಯವು ಅಂದರೆ " ನರಕ " ದ ಭಯ ಇಲ್ಲ ಎನ್ನುವುದನ್ನು ಶ್ರೀ ಶ್ಯಾಮಸುಂದರದಾಸರು ಶ್ರೀ ರಾಘವೇಂದ್ರ ಗುರುರಾಯರ ಅದ್ಭುತ ಮಹಿಮೆಯನ್ನು ಅತಿ ಮನೋಜ್ಞವಾಗಿ ಸರಳ ಸುಂದರವಾಗಿ ತಿಳಿಸಿದ್ದಾರೆ.

ಮತ್ತೊಂದು ಪದ್ಯದಲ್ಲಿ....

ರಾಗ : ಕಾಂಬೋಧಿ ತಾಳ : ಝಂಪೆ

ಸತತ ಪಾಲಿಸೋ ಯೆನ್ನ ।
ಯತಿ ರಾಘವೇಂದ್ರ ।
ಪತಿತ ಪಾವನ ಪಾವನ ।
ಸುತ ಮತಾಂಬುಧಿ ಚಂದ್ರ ।। ಪಲ್ಲವಿ ।।

ನಂಬಿದೆನೋ ನಿನ್ನ ಚರಣಾಂಬುಜವ ಮನ್ಮನದ ।
ಹಂಬಲವ ಪೂರೈಸೋ ಬೆಂಬಿಡದಲೆ ।
ಕುಂಭಿಣೀಸುರ ನಿಕುರುಂಬ ವಂದಿತ ಜಿತ ।
ಶಂಬರಾಂತಕ ಶಾತಕುಂಭ ಕಶ್ಯಪ ತನಯ ।। ಚರಣ ।।

( ಕುಂಭಿಣೀಸುರ = ಭೂಸುರ; ನಿಕುರುಂಬ = ಸಮೂಹ; ಶಾತಕುಂಭ = ಬಂಗಾರ; ಶಾತಕುಂಭಕಶ್ಯಪ = ಹಿರಣ್ಯಕಶಿಪು; ಶಾತಕುಂಭಕಶ್ಯಪ ತನಯ = ಹಿರಣ್ಯಕಶಿಪುವಿನ ಮಗ ಪ್ರಹ್ಲಾದ )

ಕ್ಷೋಣಿಯೊಳು ನೀ ಕುಂಭಕೋಣ ಕ್ಷೇತ್ರದಿ ಜನಿಸಿ ।
ವೀಣಾ ವೇಂಕಟ ಅಭಿದಾನದಿಂದ ।
ಸಾನುರಾಗದಿ ದ್ವಿಜನ ಪ್ರಾಣ ಉಳುಹಿದ ಮಹಿಮ ।
ಯೇನೆಂದು ಬಣ್ಣಿಸಲಿ ಜ್ಞಾನಿಕುಲ ತಿಲಕ ।। ಚರಣ ।।

ಮಂದಮತಿಗಳ ಸಂಗದಿಂದ ನಿನ್ನಯ ಚರಣ ।
ಇಂದಿನ ತನಕ ನಾ ಪೊಂದಲಿಲ್ಲ ।
ಕುಂದು ಯೆಣಿಸದೆ ಕಾಯೋ ಕಂದರ್ಪ ಪಿತ । ಶ್ಯಾಮ ।
ಸುಂದರನ ದಾಸ ಕರ್ಮಂದಿ ಕುಲವರಿಯ ।। ಚರಣ ।।

ನಮ್ಮ ನಿಮ್ಮೆಲ್ಲರಿಗೂ ರಾಯರೇ ಗತಿಯು ನಮಗೆ ಶ್ರೀ ರಾಘವೇಂದ್ರ ಗುರುರಾಯರೇ ಗತಿಯು!!!!!

ನಮ್ಮ ಪ್ರೀತಿಯ ಗುರುಗಳಾದ ಶ್ರೀ ಶ್ಯಾಮಸುಂದರ ದಾಸರ ಕೃತಿ ಸ್ಮರಣೆ ಮಾಡಿ ಅವರ ಅವರ ಅಂತರ್ಯಾಮಿ ಶ್ರೀ ಜಗನ್ನಾಥದಾಸರ, ಶ್ರೀ ರಾಯರ ಅಂತರ್ಯಾಮಿ ಶ್ರೀ ಭಾರತೀ ರಮಣ ಮುಖ್ಯಪ್ರಾಣಾಂತರ್ಗತ ಶ್ರೀಮನ್ಮೂಲರಘುಪತಿ ವೇದವ್ಯಾಸೋsಭಿನ್ನ ಶ್ರೀ ಲಕ್ಷ್ಮೀನಾರಾಯಣನು ಎಲ್ಲಾ ಸಜ್ಜನ ವೃಂದಕ್ಕೆ ಪರಮಾನುಗ್ರಹ ಮಾಡಲಿ ಎಂದು ಪ್ರಾರ್ಥಿಸುವ....

ಆಚಾರ್ಯ ನಾಗರಾಜು ಹಾವೇರಿ
ಗುರು ವಿಜಯ ಪ್ರತಿಷ್ಠಾನ
" ಶ್ರೀ ಶ್ಯಾಮಸುಂದರ - ೩ "

ದಿನಾಂಕ : 13.05.19 ಸೋಮವಾರ ಶ್ರೀ ಶ್ಯಾಮಸುಂದರದಾಸರ ಆರಾಧನಾ ಮಹೋತ್ಸವ!!!

ಶ್ರೀ ರಾಯರ - ಶ್ರೀ ಜಗನ್ನಾಥದಾಸರ - ಶ್ರೀ ಐಕೂರು ಆಚಾರ್ಯರ - ಶ್ರೀ ಅಸ್ಕಿಹಾಳ ಗೋವಿಂದದಾಸರ ಕಾರಣ್ಯ ಪಾತ್ರರಾದ ಶ್ರೀ ಶ್ಯಾಮಸುಂದರದಾಸರ ಕುರಿತು ಮತ್ತಷ್ಟು ಮಾಹಿತಿ....

" ಆಶು ಕವಿಗಳ ಕಾವ್ಯ ಪ್ರತಿಭೆ "

ಶ್ರೀ ಗುಂಡಾಚಾರ್ಯರು ( ಶ್ರೀ ಶ್ಯಾಮಸುಂದರದಾಸರು ) ವರಕವಿ. ಕಾವ್ಯ ರಚನಾ ಪ್ರತಿಭೆಯು ಅವರಿಗೆ ಬಾಲ್ಯದಿಂದಲೇ ಅಂಕುರಿಸಿತ್ತು. ಮೂರನೆಯ ವರ್ಗದಲ್ಲಿ ಓದುತ್ತಿದ್ದಾಗ ಒಮ್ಮೆ ಶಾಲೆಗೇ ಶಿಕ್ಷಣ ವಿಭಾಗಾಧಿಕಾರಿಯು ಪರ್ಯವೇಕ್ಷಣೆಗಾಗಿ ಬಂದನು. ಶಾಲೆಯ ಅಧ್ಯಾಪಕರಾದ ಶ್ರೀ ವೆಂಕಪ್ಪನವರು ಹುಡುಗರಿಂದ ಒಳ್ಳೇ ಕವಿತೆಯನ್ನು ಹಾಡಿಸಿ ಆ ಅಧಿಕಾರಿಯನ್ನು ಸ್ವಾಗತಿಸಬೇಕೆಂಬ ಆಸೆ. ಆದರೆ ಆ ಕ್ಷಣದಲ್ಲಿ ಸುಂದರವಾದ ಕವಿತೆಯನ್ನು ರಚಿಸುವವರ್ಯಾರು?

ಅವರು ತಮ್ಮ ಅಪೇಕ್ಷೆಯನ್ನು ಮಕ್ಕಳ ಮುಂದೆ ಹೇಳಿದರು. ಆ ಕ್ಷಣದಲ್ಲಿ ಶ್ರೀ ಗುಂಡಾಚಾರ್ಯರು ಒಂದು ಸುಂದರವಾದ ಸ್ವಾಗತದ ಹಾಡನ್ನು ರಚಿಸಿ ಗುರುಗಳಿಗೆ ಗುರು ದಕ್ಷಿಣೆಯ ರೂಪದಲ್ಲಿ ಕೊಟ್ಟರು.

ಶ್ರೀ ಗುಂಡಾಚಾರ್ಯರಲ್ಲಿರುವ ಕವಿತಾ ಶಕ್ತಿಯನ್ನು ಕಂಡು ಗುರುಗಳು ಬೆರಗಾದರು. ಅಧಿಕಾರಿಯೂ ಸಹ ರಚನೆಯಲ್ಲಿರುವ ಶಬ್ದ ಲಾಲಿತ್ಯವನ್ನೂ; ಅರ್ಥ ಗಾಂಭೀರ್ಯವನ್ನೂ ಕಂಡು ಬಹಳ ಸಂತೋಷಪಟ್ಟರು. ಅಲ್ಲಿಯ ವರೆಗೂ ಶ್ರೀ ಗುಂಡಾಚಾರ್ಯರಲ್ಲಿ ಸುಪ್ತವಾಗಿದ್ದ ಕವಿತಾ ಶಕ್ತಿಯು ಅಂದಿನಿಂದ ಪ್ರಕಟವಾಗ ಹತ್ತಿತು. ಶ್ರೀ ಗುಂಡಾಚಾರ್ಯರು ತಮ್ಮ ಪ್ರಾಥಮಿಕ ವಿದ್ಯಾಭ್ಯಾಸವನ್ನು ಮಾನವಿಯಲ್ಲೇ ಪೂರ್ತಿ ಮಾಡಿ ಮುಂದಿನ ವಿದ್ಯಾಭ್ಯಾಸವನ್ನು ನಿಲ್ಲಿಸಿ ತಂದೆಗೆ ಪೌರೋಹಿತ್ಯದಲ್ಲಿ ಸಹಾಯಕರಾಗಿದ್ದರು.

" ಪುಣ್ಯ ಜೀವಿಗಳು "

ಪುಣ್ಯ ಜೀವಿಗಳು ಪ್ರಾರಬ್ಧ ಕರ್ಮಗಳನ್ನು ಸವಿಸಲೆಂದೇ ಭೂಮಿಯ ಮೇಲೆ ಜನ್ಮ ತಾಳುತ್ತಾರೆ. ಪ್ರಾರಬ್ಧ ಕರ್ಮಾನುಸಾರ ಅವರು ನಿಂದ್ಯಾ ಕರ್ಮಗಳನ್ನು ಮಾಡುತ್ತಾರೆ. ದೇಹಕ್ಕೆ ಅಂಟಿಕೊಂಡ ತಮ್ಮ ಕರ್ಮಗಳನ್ನು ಭಗವಂತನಿಗೆ ಅರ್ಪಿಸಿ ಅಂತರಂಗವನ್ನು ಶುಚಿಯಾಗಿಟ್ಟು ಕೊಳ್ಳುತ್ತಾರೆ.

ಶ್ರೀ ಗುಂಡಾಚಾರ್ಯರು ಮಾನವಿ ಮುನಿಪುಂಗವರಾದ ಶ್ರೀಸಹ್ಲಾದಾಂಶ ಜಗನ್ನಾಥದಾಸರಿಗೆ ಸಂಪೂರ್ಣವಾಗಿ ಶರಣಾಗತರಾಗಿ ಅವರ ಪೂರ್ಣಾನುಗ್ರಹಕ್ಕೆ ಪಾತ್ರರಾಗಿದ್ದರು. ಶ್ರೀ ಜಗನ್ನಾಥದಾಸರನ್ನು ಮನತುಂಬಿ ಸ್ತುತಿಸಿ, ಕೀರ್ತಿಸಿ ಕೊಂಡಾಡಿದ್ದಾರೆ.

ರಾಗ : ದೇಶ್ ತಾಳ : ತ್ರಿತಾಳ

ರಂಗವಲಿದ ರಾಯ ನೀ । ಸ ।
ತ್ಸಂಗ ಪಾಲಿಸಯ್ಯಾ ।। ಪಲ್ಲವಿ ।।

ಬುಧ ಜನ ನುತ ಮನುಜ । ಪಂಚ ।

ವದನಾರ್ಯರ ತನುಜ ।
ಪದಯ ನಿನ್ನಯ ಪದ ।।
ಪದುಮವ ಭಜಿಸಿದೆ ।
ಅಧಮನಾದೆ ನಾ ಸದಮಲಕಾಯ ।। ಚರಣ ।।

ನುತಿಸುವೆ ಜಗದೊಡೆಯ ನಾಮಕ ।
ಸತತ ಪಿಡಿಯೊ ಕೈಯ್ಯ ।
ಕ್ಷಿತಿಯೊಳು ಪೂರ್ವದಿ ।।
ಪತಿತರ ಸಲಹಲು ।
ಶತಕ್ರತುರಾಯರ ಸುತನೆನಿಸಿದ ಗುರು ।। ಚರಣ ।।

ವೃಂದಾರಕಸ್ತೋಮ ವಂದಿತ ।
ನಂದನಂದನ । ಶ್ಯಾಮ ।
ಸುಂದರನೊಲಿಮೆಲಿ ।।
ಛಂದದಿ ಸ್ತಂಭ । ಸು ।
ಮಂದಿರದೊಳು ನಿಂದು ಮೆರೆದ ಗುರು ।। ಚರಣ ।।

" ಶ್ರೀ ಶ್ಯಾಮಸುಂದರದಾಸರ ಕಣ್ಣಲ್ಲಿ ಗುರುಗಳಾದ ಶ್ರೀ ಐಕೋರು ನರಸಿಂಹಾಚಾರ್ಯರು "

ಶ್ರೀಮನ್ಮಧ್ವಮತದ ಪಂಡಿತರ ಜೀವನದ ಉಸಿರು ಶ್ರೀಮದ್ಭಾಗವತ ಮಹಾ ಪುರಾಣ. ಅದರ ಅಧ್ಯಯನವೇ ಜೀವನದ ಸಾರ್ಥಕತೆ. ಅದರ ಶ್ರವಣವೇ ಜೀವನದ ಧನ್ಯತೆ. ಶ್ರೀ ಹರಿಯ ದಾಸನಗುವುದೇ ಸಾಧನೆಯ ಗುರಿ. ಶ್ರೀ ಮದ್ಭಾಗವತ ಎಲ್ಲರ ಬದುಕಿನ್ನು ಧರ್ಮದ ದಾರಿಯಲ್ಲಿ ನಡೆಸುವುದು. ತಮ್ಮ ಆತ್ಮೋದ್ಧಾರದ ಜೊತೆಯಲ್ಲಿ ತನ್ನವರೆಲ್ಲರನ್ನೂ ಉದ್ಧಾರ ಮಾಡಬೇಕು. ಇದುವೇ ಫಲವಿದು ಬಾಳ್ವುದಕೆ.

ಅಂತೆಯೇ " ದೇಹ ಸಂಬಂಧಿಭಿಃ ವಿದ್ಯಾ ಸಂಬಂಧಿಭಿಃ.... ಕರಿಷ್ಯೇ ಕಾರಯಿಷ್ಯೇ ಚ " ಎಂದು ಶ್ರೀ ಮಂತ್ರಾಲಯ ಪ್ರಭುಗಳ ವಾಣಿ.

" ದೇಹ ಸಂಬಂಧಿಕರೂ ಅಂದರೆ ಪೀಠಾಧಿಪತಿಗಳು ಮತ್ತು ವಿದ್ಯಾ ಸಂಬಂಧಿಕರು ಅಂದರೆ ದುರಹಂಕಾರವಿಲ್ಲದ ಸಾತ್ವಿಕ ವಿದ್ಯೆಯ ಮುಖಾಂತರ ಸಂಬಂಧಿಗಳಾದ ಸಜ್ಜನರ ಎಲ್ಲರಿಂದಲೂ ಸತ್ಕರ್ಮ; ಧರ್ಮ ಮಾಡಿಸುವೆ - ನಾನು ಮಾಡುವೆ.ಇದು ಬದುಕಿನ ಸಂಕಲ್ಪ!!

ಈ ರೀತಿ ಬಾಳಿದ ಭಾಗವತರ ಪರಂಪರೆಯಲ್ಲಿ ಬಂದ ಸಾಧಕರೂ; ದೈವೀ ಪುರುಷರೂ ಪ್ರಾತಃ ಸ್ಮರಣೀಯ ಪರಮಪೂಜ್ಯ ಶ್ರೀ ಐಕೋರು ನರಸಿಂಹಾಚಾರ್ಯರು. ಸಮಗ್ರ ಮಧ್ವ ಶಾಸ್ತ್ರ ತಿಳಿದ ಪಂಡಿತೋತ್ತಮರೂ - ಭಗವದ್ಭಕ್ತರೂ, ಬಿಂಬೋಪಾಸಕರೂ, ಅನುಸಂಧಾನ ಚತುರರೂ; ಶ್ರೀಮದ್ಭಾಗವತ ಧುರೀಣರೂ; ಪ್ರಭಾವಕಾರಿವ್ಯಾಖ್ಯಾನಕಾರರು. ಕೇವಲ ಶ್ರೀಮದ್ಭಾಗವತ ಹೇಳುವವರಲ್ಲ. ಅದರಂತೆ ಬಾಳಿದವರು.

ಶ್ರೀಮಧ್ಭಾಗವತ ಇವರ ಅಸ್ಥಿಗತವಾಗಿತ್ತು. ಇವರ ದೇಹದಲ್ಲಿರುವ ಪ್ರತಿಯೊಂದು ಅಸ್ಥಿ ಶ್ರೀಮದ್ಭಾಗವತ ಶ್ಲೋಕಗಳನ್ನು ಹೇಳುತ್ತಿತ್ತಂತೆ. ಇದು ಶ್ರೀ ಐಕೋರು ಆಚಾರ್ಯರ ಸಂಪರ್ಕದಲ್ಲಿ ಇದ್ದ ಸಜ್ಜನರಿಗೆಲ್ಲರಿಗೂ ಅನುಭವವಾಗಿದೆ. ಇದು ಶ್ರೀ ಐಕೋರು ಆಚಾರ್ಯರ ಹಿರಿಮೆ!!

ರಾಗ : ಪೂರ್ವಿ ತಾಳ : ತ್ರಿವಿಡಿ

ಬಾರಯ್ಯಾ ಬಾರಯ್ಯಾ ।
ಸೂರಿವರಿಯ ಐಕೋರು ನಿಲಯ ಗುರು ।। ಪಲ್ಲವಿ ।।

ನೀನಾಕಿದ ಸುಜ್ಞಾನದ ಸಸಿಗಳು ।
ಮ್ಲಾನವಾಗುತಿವೆ ಸಾನುರಾಗದಲಿ ।। ಚರಣ ।।

ಸಲೆ ತವ ಕರುಣ ಸಲಿಲವ ಎರದು ।
ಫಳಿಲನೆ ವೃದ್ದಿಯಗೊಳಿಸಿ ಸಲಹಲು ।। ಚರಣ ।।

ನಾಟಿದ ಸಸಿಗಳು ನೀಟಾಗುವ ಪರಿ ।
ತೋಟಿಗ ನೀ ಕೃಪೆ ನೋಟದಿ ಸಲುಹಲು ।। ಚರಣ ।।

ಕೋವಿದವರ ನೀ ಕಾವಲಿ ಇರಲು । ಕು ।
ಜೀವಿಗಳಿಂದಲಿ ಹಾವಳಿಯಾಗದು ।। ಚರಣ ।।

ನೀ ಮರೆದರೆ ಸುಕ್ಷೇಮವಾಗುದು ।
ಶ್ಯಾಮ ಸುಂದರರನ ಪ್ರೇಮದ ಪೋತ ।। ಚರಣ ।।

ಶ್ರೀ ಆಚಾರ್ಯರ ಮೇಲೆ ಶ್ರೀ ಶ್ಯಾಮಸುಂದರದಾಸರ ರಚನೆ...

ಶ್ರೀಮತ್ಕೃಷ್ಣ ತರಂಗ ನಿಲಯ ಐಕೂರು ಗ್ರಾಮ ನಿಲಯ
ಸ್ತಂಭೋದ್ಭವ ನಾಮಧೇಯ ದ್ವಯಭಾರ್ಯಾ ಸುಮನಃ ಪ್ರಿಯಃ ।
ಸದ್ವಾಕ್ತಾರ್ತಿ ವಿದೂರ ವಿಮಲ ಹೃದಯ ಅತ್ಯಂತ ಕರುಣಾಮಯ
ಅಸ್ಮದ್ ಸದ್ಗುರುವರ್ಯ ಏಯೋ ನಮಗೆ ನೀ ನಿತ್ಯ ಸನ್ಮಂಗಳ ।। ೧ ।।

ಸಾರೋದ್ಧಾರ ಸುಗೀತ ಭಾರತಯುತ ವೇದಾರ್ಥ ಸಂಪೂರಿತ
ಸಲ್ವಾದಾಂಶಜ ದಾಸವರ್ಯ ವಿರಚಿತ ಶ್ರೀ ಶೌರಿಕಥಾಮೃತ ।
ಪಾರಜ್ಞಂ ಸುಶಿಲೇಂದ್ರ ಮಮತ ಸಂಪೂರ್ಣ ಸಂಪಾದಿತ
ಅಸ್ಮದ್ ಸದ್ಗುರುವರ್ಯ ಏಯೋ ನಮಗೆ ನೀ ನಿತ್ಯ ಸನ್ಮಂಗಳ ।। ೨ ।।

ಅಷ್ಟಪದಲೋಷ್ಟ ಭಾವ ಸಮತ ಧೀಶ ಸನ್ಮಾನಿತ
ಅಷ್ಟೈಕಾಮಲ ಭಕ್ತಿ ಜ್ಞಾನ ಭರಿತ ವೈರಾಗ್ಯ ಸಂಶೋಭಿತ ।
ಸೃಷ್ಟ್ಯಾಂತರ್ಗತ ಬಿಂಬ ಮೂರ್ತಿ ಸತತ ಸಂದರ್ಶನಾ ನಂದಿತ
ಅಸ್ಮದ್ ಸದ್ಗುರುವರ್ಯ ಏಯೋ ನಮಗೆ ನೀ ನಿತ್ಯ ಸನ್ಮಂಗಳ ।। ೩ ।।

ಶೃಂಗಾರಾಂಗ ಸುನಾಮ ದ್ವಾದಶ ಧೃತ ಮುದ್ರಾಕ್ಷತಾಲಂಕೃತ
ಗಂಗಾನಂಗಪಿತಾಂಘ್ರಿ ಕಮಲಜ ಪಿತ ಪದ್ಮಾಕ್ಷಯಾಲಾಂಚಿತ ।
ಇಂಗಿತಜ್ಞ ಸುಸಾಧು ಸಂಗ ಸಹಿತ ಮುಕ್ತ್ಯಾಂಗನಾಲಂಗಿತ
ಅಸ್ಮದ್ ಸದ್ಗುರುವರ್ಯ ಏಯೋ ನಮಗೆ ನೀ ನಿತ್ಯ ಸನ್ಮಂಗಳ ।। ೪ ।।

ತಾಪತ್ರಯ ದೂರ ಪಾಪ ರಹಿತ ಕೋಪಾದಿ ಗುಣ ವರ್ಜಿತ
ಶಾಪಾನುಗ್ರಹಶಕ್ತ ಸುಜನ ಪ್ರೀತ ಸಂಸಾರಘನಮಾರುತ ।
ಗೋಪಾಲಾಖ್ಯದಾಸವರ್ಯ ಕವಿತಾ ಗೂಢಾರ್ಥ ಸಂಬೋಧಿತ
ಅಸ್ಮದ್ ಸದ್ಗುರುವರ್ಯ ಏಯೋ ನಮಗೆ ನೀ ನಿತ್ಯ ಸನ್ಮಂಗಳ ।। ೫ ।।

ಆಧ್ಯಾತ್ಮ ಸುವಿಚಾರ ಶಾಸ್ತ್ರ ಸತತ ಶ್ರುತ್ಯರ್ಥ ಬಹು ಗರ್ಭಿತ
ಸತ್ಯಾವಲ್ಲಭ ಸತ್ಯದೇವ ಚರಿತ ವಕ್ತಾರ ಬುಧ ಸಮ್ಮತ ।
ನಾಡ್ಯಂತರ್ಗತ ಸರ್ವತೀರ್ಥ ಸ್ನಾತ ತನ್ಮೂರ್ತಿ ಪ್ರತ್ಯಕ್ಷಕ
ಅಸ್ಮದ್ ಸದ್ಗುರುವರ್ಯ ಏಯೋ ನಮಗೆ ನೀ ನಿತ್ಯ ಸನ್ಮಂಗಳ ।। ೬ ।।

ಧರ್ಮಾಚಾರ ವಿಚಾರ ಶೀಲ ನಿರತ ಷಟ್ಕರ್ಮ ಸಂಭೂಷಿತ
ನಿರ್ಮತ್ಸರ ಮೋಹ ದೇಹ ಮಮತ ಸುಶರ್ಮ ಕುಲರಾಜಿತ ।
ಭರ್ಮೋದರವಾತಜಾತಪೋತ ಜಾತಾರಿ ಖತಿವರ್ಜಿತ
ಅಸ್ಮದ್ ಸದ್ಗುರುವರ್ಯ ಏಯೋ ನಮಗೆ ನೀ ನಿತ್ಯ ಸನ್ಮಂಗಳ ।। ೭ ।।

" ಶ್ರೀ ಶ್ಯಾಮಸುಂದರದಾಸರ ಮತ್ತೊಬ್ಬ ಗುರುಗಳಾದ ಶ್ರೀ ಅಭಿಮನ್ಯುನ ಅವತಾರರಾದ ಶ್ರೀ ಅಸ್ಕಿಹಾಳ ಗೋವಿಂದದಾಸರು "

ರಾಗ : ಮೋಹನ ತಾಳ : ತ್ರಿವಿಡಿ

ನಿಂದೆ ಯಾಕೆ ಮಾಡುವೆ ।
ಮಂದ ಮಾನವನೇ । ಗೋ ।
ವಿಂದದಾಸಾರ್ಯರನ್ನ ।।
ಎಂದೆಂದಿಗೀಮಾತು ।
ಇಂದಿರೇಶನ ಭಕುತ ।
ವೃಂದ ಮೆಚ್ಚುವುದಿಲ್ಲವೋ ಮೂಢಾ ।। ಪಲ್ಲವಿ ।।

ಬಾಲಕತನದಾರಾಭ್ಯ ।
ಶೀಲ ಸದ್ಭಕ್ತಿಯಲಿ ।
ತಾಳ ತಂಬೂರಿ ಪಿಡಿದು ।
ಶ್ರೀಲೋಲ ಮಹಿಮೆಗಳ ।।
ಪೇಳುತಲಿ ಸತತ ।
ಗೋಪಾಲ ವೃತ್ತಿಯನು ಮಾಡಿ ।
ಕಾಲವನು ಕಳೆದವರ ।। ಚರಣ ।।

ಕುಸುಮಶರ ವಟ್ಟುಳಿಗೆ ।
ವಶವಾಗದಿರಿಯೆಂದು ।
ಉಸುರುತಲಿ ಶಿಷ್ಯ ಗಣಕೆ ।
ಅಸುರಾರಿ ಮಹಿಮೆಯನು ।।
ರಸವತ್ಕವಿತೆಯಲಿಂದ ।
ನಿಶಿ ಹಗಲು ವರ್ಣಿಸಿದ ।
ಅಸಿಗ್ಯಾಳು ನಿಲಯರನ ।। ಚರಣ ।।

ಆಶೆ ಕ್ರೋಧವ ತೊರೆದು ।
ಕ್ಲೇಶ ಶುಭ ಸಮ ತಿಳಿದು ।
ಲೇಸಾಗಿ ಗುರು ಸೇವೆಗೈದು ।
ವಾಸವಾನುಜನಾದ ।।
ಶ್ರೀ ಶ್ಯಾಮಸುಂದರನ ।
ವಾಸ ಸ್ಥಾನಕೆ । ತೆರಳಿ ।
ದ ಸುಗುಣರನು ವ್ಯರ್ಥ ।। ಚರಣ ।।

ಶ್ರೀ ಜಗನ್ನಾಥದಾಸರನ್ನೇ ನಿತ್ಯದಲ್ಲೂ ನಂಬಿದ್ದ ಶ್ರೀ ಗುಂಡಾಚಾರ್ಯರು ರಾಯಚೂರು ಜಿಲ್ಲೆಯ " ಅಸ್ಕಿಹಾಳ " ಯೆಂಬ ಗ್ರಾಮಕ್ಕೆ ಬಂದರು. ಅಲ್ಲಿ ಶ್ರೀ ಗೋವಿಂದದಾಸರೆಂಬ ಜ್ಞಾನಿಗಳಿದ್ದರು.

ಸಾತ್ವಿಕರಾದ ದೀನ ಜನರ ಉದ್ಧಾರಕಾಗಿ ತಮ್ಮ ಜೀವನವನ್ನೇ ಮೀಸಲಾಗಿಟ್ಟ ಧನ್ಯ ಜೀವಿಗಳು ಶ್ರೀ ಗೋವಿಂದದಾಸರು. ನೂರಾರು ಹರಿಜನರನ್ನು ಸನ್ಮಾರ್ಗ ಪ್ರವೃತ್ತರನ್ನಾಗಿ ಮಾಡಿ ಅವರಿಗೆ ವೈಷ್ಣವ ದೀಕ್ಷೆಯನ್ನು ನೀಡಿ ಸಾಧನೆಯ ಮಾರ್ಗವನ್ನು ತೋರಿಸಿಕೊಟ್ಟ ಮಹಾನ್ ಕ್ರಾಂತಿ ಪುರುಷರು ಶ್ರೀ ಗೋವಿಂದದಾಸರು!

ಶ್ರೀ ದಾಸರ ಬೇಟೆಗಾಗಿ ಶ್ರೀ ಗುಂಡಾಚಾರ್ಯರು ಅವರ ಮನೆಗೆ ಬಂದರು. ಶ್ರೀ ದಾಸರು ಸ್ನಾನಕ್ಕಾಗಿ ಬಾವಿಗೆ ಹೋಗಿರುವುದಾಗಿ ತಿಳಿದು ತಾವೂ ಬಾವಿಯ ಕಡೆಗೆ ಹೋದರು. ತಮ್ಮ ಕಡೆಗೆ ಬರುತ್ತಿದ್ದ ಶ್ರೀ ಗುಂಡಾಚಾರ್ಯರನ್ನು ಕಂಡು ಶ್ರೀ ದಾಸರು ಕೋಪಗೊಂಡವರಂತೆ ಚಿಕ್ಕ ಕಲ್ಲನ್ನು ತೆಗೆದುಕೊಂಡು ಶ್ರೀ ಆಚಾರ್ಯರ ಮೇಲೆ ಎಸೆದರು. ಅದು ಅವರ ತಲೆಗೆ ಬಡೆದು ಗಾಯವಾಗಿ ರಕ್ತ ಸುರಿಯಿತು.

ಶ್ರೀ ಗೋವಿಂದದಾಸರು ಮಮತೆಯಿಂದ ರಕ್ತವನ್ನು ಒರೆಸಿ ಶ್ರೀ ಆಚಾರ್ಯರ ಬೆನ್ನನ್ನು ಸವರಿದರು. ಶ್ರೀ ಗುಂಡಾಚಾರ್ಯರ ತಲೆಯಿಂದ ರಕ್ತದೊಟ್ಟಿಗೆ ಉಳಿದ ಅಲ್ಪಸ್ವಲ್ಪ ಅಜ್ಞಾನವೂ ಹೊರಟು ಹೋಯಿತು. ಶ್ರೀ ದಾಸರ ಅನುಗ್ರಹವೂ ಆಯಿತು. ಜ್ಞಾನಿಗಳ ಕೋಪ ತಾಪಗಳು ಸಹ ಜನರ ಉದ್ಧಾರಕ್ಕೆ ಕಾರಣವಾಗುತ್ತದೆ.

ವಿಶ್ವಾಮಿತ್ರನ ಕೋಪ ಹರಿಶ್ಚಂದ್ರನಿಗೆ ಶಾಶ್ವತವಾದ ಕೀರ್ತಿಯನ್ನು ತಂದು ಕೊಟ್ಟಿತು. ಕೊನೆಗೆ ಎಲ್ಲಾ ದೇವತೆಗಳ ಅನುಗ್ರಹವೂ ಅಭ್ಯವಾಯಿತು. ಇಂದು ಸತ್ಯಕ್ಕೆ ಹರಿಶ್ಚಂದ್ರನು ಉದಾಹರಣೆಯಾಗಿದ್ದಾನೆ.

ಶ್ರೀ ಗೋವಿಂದದಾಸರ ನಾಟಕೀಯ ಕೋಪವು ಶ್ರೀ ಗುಂಡಾಚಾರ್ಯರ ಅಪೂರ್ವ ಜ್ಞಾನದ ಉದಯಕ್ಕೆ ಕಾರಣವಾಯಿತು. ಅಂದಿನಿಂದ ಶ್ರೀ ಗುಂಡಾಚಾರ್ಯರ ಸರ್ವ ಕಾರ್ಯ ಕಲಾಪಗಳು ಭಗವಂತನಿಗೆ ಮೀಸಲಾಯಿತು. ಅವರು ತಮ್ಮ ಎಲ್ಲಾ ಲೌಕಿಕಾಲೌಕಿಕ ವ್ಯಾಪಾರವನ್ನು ಸಹಾ ಶ್ರೀ ಹರಿವಾಯುಗಳಿಗೆ ಅರ್ಪಿಸಿ ನಿರ್ಲಿಪ್ತರಾದರು.

" ಆನಂದಾನುಭವ "

ಶ್ರೀ ಶ್ಯಾಮಸುಂದರದಾಸರುಪ್ರತಿನಿತ್ಯ ಬ್ರಾಹ್ಮೀ ಮುಹೂರ್ತದಲ್ಲಿ ಎದ್ದು ಮುಸುಗಿಟ್ಟುಕೊಂಡು ಒಂದೆರಡು ಘಂಟೆಗಳ ಕಾಲ ಕುಳಿತು ಬಿಡುತ್ತಿದ್ದರು. ಯಾರಿಗೂ ತೋರಗೊಡದೆ ಮಾನಸಿಕವಾಗಿ ಭಗವಂತನಿಗೆ ತಮ್ಮ ಪೂಜಾದಿಗಳನ್ನು ಸಲ್ಲಿಸಿ ಬಿಡುತ್ತಿದ್ದರು.

ಶ್ರೀ ಶ್ಯಾಮಸುಂದರದಾಸರಿಗೆ " ಹರಿಕಥಾಮೃತಸಾರ " ವೆಂದರೆ ಎಲ್ಲಿಲ್ಲದ ಅಭಿಮಾನ ಮತ್ತು ಪ್ರಾಣ. ಶ್ರುತಿ - ಸ್ಮೃತಿ - ಪುರಾಣ ತತ್ತ್ವ ರಹಸ್ಯಗಳನ್ನು ತನ್ನಲ್ಲಡಿಗಿಸಿಕೊಂಡ ಈ ದಾಸ ಸಾಹಿತ್ಯದ ಮೇರು ಕೃತಿಯನ್ನು ನಿತ್ಯ ನಿರಂತರವಾಗಿ ಮನನ ಮಾಡುತ್ತಿದ್ದರು. ಜಿಜ್ಞಾಸುಗಳಾಗಿ ಬಂದ ಆಪ್ತರಿಗೆ ತತ್ತ್ವ ರಹಸ್ಯಗಳನ್ನು ತಿಳಿಯ ಹೇಳುತ್ತಿದ್ದರು. ಕೆಲವೊಮ್ಮೆ ತಮಗಾದ ಆನಂದದ ಅನುಭವವನ್ನು ಕೃತಿಗಳ ರೂಪದಲ್ಲಿ ಹೇಳುತ್ತಿದ್ದರು. ಶಿಷ್ಯರು ಯಾರಾದರೂ ಈ ಹಾಡನ್ನು ಬರೆದಿಡುತ್ತಿದ್ದರು.ಉದಾಹರಣೆಗಾಗಿ....

ರಾಗ : ರೇಗುಪ್ತಿ ತಾಳ ತ್ರಿವಿಡಿ

ಕಂಬುಕಂಧರ ಸತತ ಬಿಡದೆ । ರಕ್ಷಿ ।
ಸಂಬುಜೋದ್ಭವನ ತಾತ ।
ಜಂಭಾರಿ ವೈರಿ ಕುಲಾಂಬುಧಿ ಕುಂಭಜ ।
ಕುಂಭಿಣಿ ಸುರಾ ನಿಕುರಂಬ ಪೋಷಕ ದೇವಾ ।। ಪಲ್ಲವಿ ।।

ನಳಿನಾಕ್ಷ ನರಕೇಸರಿ ನಂಬಿದೆ ನಿನ್ನ ।
ಹಲಧರಾನುಜನೆ ಶೌರಿ ।
ಇಳಿಜದಾಯಕ ಸಿರಿ ನಿಲಯ ನಿತ್ಯಾನಂದ ।
ಎಲರುಣಿ ವರಶಾಯಿ ಕಲುಷ ಸಂಹಾರಕ ।।
ಜಲದರಿಪುವಿನ ತನಯನನುಜನ ।
ಕಲಹದೊಳು ಜೈಸಿದನ ತಾತನ ।
ಕುಲ ವಿರೋಧಿಯ ಧ್ವಜನ ಜನಕಗೆ ।
ಒಲಿದು ಬೆಂಬಲವಾದ ಕೇಶವ ।। ಚರಣ ।।

ನಿಗಮ ರಕ್ಷಕ ಕೂರ್ಮ ಕಿಟ ಮಾನವ ।
ಮೃಗ ವಟು ಪರಶುರಾಮ ।
ಅಗಜೇಶ ಶರಕಾಲ ನೃಗಪತಿ ವರದನೆ ।
ವಿಗತ ವಸನ ಕಲ್ಕಿ ಅಗಣಿತ ಮಹಿಮನೆ ।।
ಗಗನ ರಾಜನ ಮಗಳ ಗೋಸುಗ ।
ನಗುತ ಮಡದಿಯನಗಲಿ ಬಂದು ।
ಜಗವ ಪೊತ್ತನ ನಗದಿ ನೆಲೆಸಿದೆ ।

ತ್ರಿಗುಣ ವರ್ಜಿತ ಖಗವರೂಢನೆ ।। ಚರಣ ।।

ಮಂದರೋದ್ಧರ ವಿಶಾಲ ಮಹಿಮನಾದ ।
ಸಿಂಧೂರ ಪರಿಪಾಲ ।
ಕಂದರ್ಪ ಪಿತ ಶ್ಯಾಮಸುಂದರವಿಠಲನೆ ।
ವಂದಿಸುವೆನು ಎನ್ನ ಬಂಧನ ಬಿಡಿಸಯ್ಯ ।।
ಗಂಧವಾಹನ ವೀಂದ್ರ ಫಣಿಪತಿ ।
ಸಿಂಧುಜೋದ್ಭವಪತಿ ವಿರೋಧಿ । ಪು ।
ರಂದರಾಮರ ವೃಂದ ವಂದ್ಯ ।
ನಂದಿಸುತ ಗೋವಿಂದ ಗೋಪತಿ ।। ಚರಣ ।।

" ಆತ್ಮ ಪ್ರಬೋಧಕ ಪತ್ರಗಳು ( ಕಾಗದಗಳು ) "

ಶ್ರೀ ಶ್ಯಾಮಸುಂದರ ದಾಸರಿಗೆ ಮತ್ತೊಂದು ಉತ್ತಮ ಅಭ್ಯಾಸವಿತ್ತು. ಅವರು ತಮ್ಮ ಆಪ್ತರಿಗೆ ಆಗಾಗ್ಗೆ ಕಾಗದಗಳನ್ನು ಬರೆಯುತ್ತಿದ್ದರು. ಆ ಕಾಗದಗಳು ಸಾಮಾನ್ಯ ಕಾಗದಳಾಗಿರದೇ " ಅಧ್ಯಾತ್ಮಿಕ ಪ್ರಭೋಧಕ " ಗಳಾಗಿರುತ್ತಿದ್ದವು. ಪ್ರತಿ ಕಾಗದದಲ್ಲೂ ಯಾವುದೋ ಒಂದು ವೇದಾಂತದ ವಿಷಯವನ್ನು ಕೂಲಂಕುಷವಾಗಿ ಚರ್ಚಿಸುತ್ತಿದ್ದರು. ಈ ರೀತಿಯಲ್ಲಿ ಕಾಗದ ಬರೆಯುವುದು ಅನಾದಿಯಿಂದ ಸಿದ್ಧವಾದುದು.

ಶ್ರೀ ಶ್ಯಾಮಸುಂದರದಾಸರು ಬರೆದ ಅನೇಕ ಪತ್ರಗಳು ಇಂದಿಗೂ ಲಭ್ಯವಿದೆ. ಆದರೆ ಶ್ರೀ ಶ್ಯಾಮಸುಂದರದಾಸರು ಈ ಯಾವುದನ್ನೂ ಜನರ ಮನಸ್ಸನ್ನು ಮೆಚ್ಚಿಸುವುದಕ್ಕಾಗಲೀ ಮಾಡುತ್ತಿರಲಿಲ್ಲ. ಎಲ್ಲವನ್ನೂ ಶ್ರೀ ಹರಿಯ ಪ್ರೀತಿಗಾಗಿ ಮಾಡಿದ ಪುಣ್ಯಾತ್ಮರು!!!

ಕರ್ನಾಟಕದ ಹರಿದಾಸರೆಲ್ಲರೂ ಸದಾಚಾರದಲ್ಲೇ ಜೀವನವನ್ನು ಸಾಗಿಸಿರುವರು. ತಾವು ಉದ್ಧೃತರಾಗುವುದರೊಂದಿಗೆ ಅಕ್ಕಪಕ್ಕದ ಜನರನ್ನೂ ಉದ್ಧರಿಸಬೇಕೆಂಬ ಕಳಕಳಿ ಈ ಹರಿದಾಸರದ್ದು. ಇದಕ್ಕಾಗಿಯೇ ಹರಿದಾಸರು " ಯಾಯಿವಾರ " ಮಾಡುತ್ತಿದ್ದರು. ಅರುಣೋದಯಕ್ಕೆ ಎದ್ದು ಕಾಲಿಗೆ ಗೆಜ್ಜೆಕಟ್ಟಿ, ಕೈಯಲ್ಲಿ ತಂಬೂರಿ ಮೀಟುತ್ತಾ ಹರಿನಾಮ ಸಂಕೀರ್ತನೆಯನ್ನು ಮಾಡುತ್ತಾ ಬೀದಿ ಬೀದಿಗಳಲ್ಲಿ ಅಲೆಯುತ್ತಿದ್ದರು.

ಜೀವನದ ಗುರಿಯನ್ನರಿಯದೇ ಸಂಸಾರದಲ್ಲಿ ಮುಳುಗಿದ್ದ ಜನರ ಕಿವಿಗೆ ಹರಿ ನಾಮವನ್ನು ಕೇಳಿಸಿ; ಧರ್ಮದ ಸಂದೇಶವನ್ನು ನೀಡಿ; ಅವರ ಮನಸ್ಸನ್ನು ಜಾಗೃತಗೊಳಿಸುತ್ತಿದ್ದರು. ದಲಿತ ಜನಾಂಗದ ಉದ್ಧಾರಕ್ಕಾಗಿ ಶ್ರಮಿಸಿದರು. ಶ್ರೀ ಶ್ಯಾಮಸುಂದರದಾಸರು ಕೂಡಾ ಈ ವಿಷಯದಲ್ಲಿ ತಮ್ಮ ಅಳಿಲು ಸೇವೆಯನ್ನು ಸಮಾಜಕ್ಕೆ ಸಲ್ಲಿಸಿರುವರು!!!

" ಕೊಪ್ಪರ ಶ್ರೀ ನರಸಿಂಹ ದೇವರ ಸ್ತುತಿ "

ರಾಗ : ತೋಡಿ ತಾಳ : ಝಂಪೆ

ನಮೋ ನಮೋ ನರಮೃಗರಾಜಾ । ಸದಾ ।
ನಮಿಪೆ ಸುಜನರಿಗೆ ಅಮರ ಮಹಿಜ ।। ಪಲ್ಲವಿ ।।

ಕಮಲಸಂಭವ ಸುಮನಸೇಂದ್ರ ಪ್ರಮುಖ ।
ನಮಿತ ಸುಮಹಿಮ । ಗಜರಿಪು ।
ದಮನ ದ್ವಿಜವರ ಗಮನ ಗುಣನಿಧಿ ।
ಕಮಲೆಯಳ ಮುಖ ಕುಮುದ ಹಿಮಕರ ।। ಅ. ಪ ।।

ಜಾತ ರಹಿತ ಜಗಧೀಶ । ದನು ।
ಜಾತ ವ್ರಾತಾರಣ್ಯ ಜಾತ ವೇಧಸ ।
ಶೀತಾಂಶು ಭಾನು ಸಂಕಾಶ । ಶ್ರೀ ಭೂ ।
ನಾಥ ಭೂತೇಶ ಹೃತ್ಪಾಥೋಜ ವಾಸ ।।
ಶಾತಕುಂಭಕಶ್ಯಪನ ಗರ್ವ । ಜೀ ।

ಮೂತ ವೃಂದಕೆ ವಾತನೆನಿಸುತ ।
ಪೋತ ಪ್ರಹ್ಲಾದಗೆ ಒಲಿದು । ಸಂ ।
ಪ್ರೀತಿಯಲಿ ಪೊರೆದಾತ ದಾತನೆ ।। ಚರಣ ।।

ಮಾತುಳ ವೈರಿ ಗೋಪಾಲ । ವೇಣು ।
ಗೀತ ಸಂಪ್ರೀತ ಶ್ರೀ ರುಕ್ಮಿಣೀ ಲೋಲ ।
ಧಾತಾಂಡೋಧರ ವನಮಾಲಾ ದೃತ ।
ಪೂತನ ಬಕ ಶಕಟಾರಿ ಹೃತ್ಶೂಲ ।।
ಪಾತಕಾದ್ರಿ ಶತಧಾರ ಶುಭಕರ ।
ಶ್ವೇತದ್ವೀಪಾನಂತ ಪೀಠ । ಪು ।
ನೀತ ವರ ವೈಕುಂಠ ಘನ । ಸು ।
ಕೇತನ ತ್ರಯವೀತ ಭವ ಭಯಹರ ।। ಚರಣ ।।

ಮಾರ ಜನಕ ಶುಭಕಾಯ ಕೃಷ್ಣಾ ।
ತೀರ ಸುಶೋಭಿತ ಕಾರ್ಪರ ನಿಲಯ ।
ದೂರ ನೋಡದೇ ಪಿಡಿ ಕೈಯ್ಯ । ಶ್ರೀ ಸ ।
ಮೀರ ಸನ್ನುತ ಶ್ಯಾಮಸುಂದರೇಯ ।।
ವಾರಿಚರ ಗಿರಿ ಭಾರಧರ । ಭೂ ।
ಚೋರ ಹರ ಗಂಭೀರ ವಟು । ಕು ।
ಠಾರಕರ ರಘುವೀರ । ನಂದ ।
ವಸನ ವಿದೂರ ಹಯಧ್ವಜ ।। ಚರಣ ।।

" ವಿಶೇಷ ವಿಚಾರ "

ಕ್ರಿ ಶ 2009 ರಲ್ಲಿ ಜರ್ಮನಿಯ ಶ್ರೀ ಫಿಲಿಪ್ಸ್ ಎಂಬುವರು ಸಂಶೋಧನೆಗಾಗಿ ಬೆಂಗಳೂರಿಗೆ ಬಂದಿದ್ದರು. ಅವರು ಜರ್ಮನಿ ಪ್ರಜೆಯಾದರೂ ವೇದ ಸಾಹಿತ್ಯ ಮತ್ತು ಹರಿದಾಸ ಸಾಹಿತ್ಯದಲ್ಲಿ ಬಹಳಷ್ಟು ಜ್ಞಾನವನ್ನು ಸಂಪಾದಿಸಿದ್ದವರು. ಅಲ್ಲದೇ ಅವರು ತಮ್ಮ ಭಾಷೆಯ ಜೊತೆಯಲ್ಲಿ ಕನ್ನಡ, ತೆಲುಗು ಮತ್ತು ಸಂಸ್ಕೃತದಲ್ಲಿ ಜ್ಞಾನ ಹೊಂದಿದವರು. ನನಗೆ ಅವರು ಜಯನಗರದ ಶ್ರೀ ರಾಘವೇಂದ್ರಸ್ವಾಮಿಗಳವರ ಮಠದಲ್ಲಿ ಕೀರ್ತಿಶೇಷ ಶ್ರೀ ರಾಜಾ ಎಸ್ ರಾಜಗೋಪಾಲಚಾರ್ಯರ ಮುಖಾಂತರ ಭೇಟಿಯಾಗಿತ್ತು ಮತ್ತು ಅವರು ಶ್ರೀ ಮಠದಲ್ಲಿ ಸುಮಾರು 15 ದಿನಗಳು ಇದ್ದರು. ಆಗ ನನ್ನ ಜೊತೆ ಅವರು ಮಾತಾಡುವ ಸಂದರ್ಭದಲ್ಲಿ ಶ್ರೀ ಶ್ಯಾಮಸುಂದರದಾಸರ ಬಗ್ಗೆ ಕೊಟ್ಟ ಹೇಳಿಕೆ ಪರಮ ಅದ್ಭುತವಾಗಿದೆ.

" ಶ್ರೀ ಶ್ಯಾಮ ಸುಂದರ ದಾಸರ ಕೃತಿಗಳನ್ನು ನೋಡಿದಾಗ 18ನೇ ಶತಮಾನದಲ್ಲಿ ಇದ್ದ ಶ್ರೀ ಜಗನ್ನಾಥದಾಸರ ಕೀರ್ತನೆಗಳು ಜ್ಞಾಪಕಕ್ಕೆ ಬರುತ್ತವೆ. ಕಾರಣ ಅವರು ಮಾಡಿದ ಪದ ಪ್ರಯೋಗ ಮತ್ತು ಆ ಪದಗಳು ಅತ್ಯಂತ ಲಾಲಿತ್ಯದಿಂದ ಕೂಡಿವೆ "

ಎಂದು ಅವರು ಹೇಳಿದಾಗ ಆಶ್ಚರ್ಯ ಮತ್ತು ಆನಂದ ಎರಡೂ ಆಯಿತು. ಅಂದರೆ ಶ್ರೀ ಹರಿದಾಸ ಸಾಹಿತ್ಯವು ಇಡೀ ಪ್ರಪಂಚದ ಜನರೇ ಇಷ್ಟ ಪಡುವಂಥಾ ಸಾಹಿತ್ಯ - ಇದುವೇ ಹರಿದಾಸ ಸಾಹಿತ್ಯದ ಹಿರಿಮೆ!!

ಆಚಾರ್ಯ ನಾಗರಾಜು ಹಾವೇರಿ
ಗುರು ವಿಜಯ ಪ್ರತಿಷ್ಠಾನ